₹ 4 | ಪುಟ: 4 | ಸಂಪುಟ: 4 | ಸಂಚಿಕೆ 89 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

Volume : 4 | Issue: 89 | Sunday, 21, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23




## ಮೇ 22 ರಿಂದ 3 ದಿನ ವಿಧಾನಸಭೆ ಅಧಿವೇಶನ

- ಆರ್ವಿ. ದೇಶಪಾಂಡೆ ಹಂಗಾಮಿ ಸ್ಪೀಕರ್

ಬೆಂಗಳೂರು: ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ನಂತರ ಸೋಮವಾರದಿಂದ ಮೇ 22 ಮೊದಲ ವಿಧಾನಸಭೆ ಅಧಿವೇಶನ ನಡೆಯಲಿದೆ. ಒಟ್ಟು ಮೂರು ದಿನಗಳ ಕಾಲ ಅಧಿವೇಶನ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಮೊದಲ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹಂಗಾಮಿ ಸ್ಪೀಕರ್ ನೇತೃತ್ವದಲ್ಲಿ ಅಧಿವೇಶನ ನಡೆಯಲಿದೆ ಎಂದರು.

# ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪ್ರತಿಜ್ಞಾವಿಧಿ ಸ್ವೀಕಾರ



ಬೆಂಗಳೂರು: ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಅವರು ಶನಿವಾರ ಪ್ರಮಾಣವಚನ ಸ್ವೀಕಾರ ಮಾಡಿದರು.

ಕಂಠೀರವ ಸ್ಟೇಡಿಯಂನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 8 ಮಂದಿ ಸಚಿವರು ಕೂಡ ಪ್ರಮಾಣವಚನ ಸ್ವೀಕಾರ ಮಾಡಿದರು.

ಇವರೆಲ್ಲರಿಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರಮಾಣವಚನ ಬೋಧಿಸಿದರು. ಸಿದ್ದರಾಮಯ್ಯ ಅವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು. ಇನ್ನು ಡಿಕೆಶಿಯವರು ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್, ನಟ ಕಮಲ್ ಹಾಸನ್, ಶಿವರಾಜ್ ಕುಮಾರ್, ದುನಿಯಾ ವಿಜಯ್, ನಟಿ ರಮ್ಯಾ, ಉಮಾಶ್ರೀ, ಸೇರಿದಂತೆ ಹಲವಾರು ಗಣ್ಯರು ಭಾಗಿಯಾಗಿದ್ದರು.

ವಿಧಾನ ಸೌಧದ ಮೂರನೇ ಮಹಡಿಯಲ್ಲಿ ರೂಂ ನಂಬರ್ 323ರ ಸಿಎಂ ಕಚೇರಿ ಬಳಿ ನೇಮ್ ಪ್ಲೇಟ್ ಚೇಂಜ್ ಮಾಡಲಾಗಿದೆ.



## ಕರ್ನಾಟಕದ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್‌ಗೆ ಪ್ರಧಾನಿ ಮೋದಿ ಅಭಿನಂದನೆ



ಬೆಂಗಳೂರು: ಕರ್ನಾಟಕದ ಮುಖ್ಯಮಂತ್ರಿಯಾಗಿ ಮತ್ತು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ ಅಭಿನಂದಿಸಿದ್ದಾರೆ.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರೊಂದಿಗೆ ಎಂಟು ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

'ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿಕೆ ಶಿವಕುಮಾರ್ ಅವರಿಗೆ ಅಭಿನಂದನೆಗಳು. ಫಲಪ್ರದವಾದ ಅಧಿಕಾರಾವಧಿಗೆ ನನ್ನ ಶುಭಾಶಯಗಳು' ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ.

ಅಲ್ಲದೆ, ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ ಅವರಿಗೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅಭಿನಂದನೆ ಸಲ್ಲಿಸಿದ್ದಾರೆ.


ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸಿದ್ದರಾಮಯ್ಯ ಅವರು ಹಾಗೂ ಅವರ ಸಚಿವ ಸಂಪುಟ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು ಎಂದು ಅವರು ಟ್ವೀಟ್ ಮಾಡಿದ್ದಾರೆ.

## ದ್ವೇಷ ಅಳಿಸಿ ಹೋಗಿ, ಪ್ರೀತಿ ಗೆದ್ದಿದೆ: ರಾಹುಲ್ ಗಾಂಧಿ

ಬೆಂಗಳೂರು: ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅಬ್ಬರದ ಭಾಷಣ ಮಾಡಿದರು.

ರಾಜ್ಯದ ಜನತೆಯನ್ನುದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿಯವರು, ಕರ್ನಾಟಕದ ಜನ–ರಿಗೆ ನನ್ನ ಮನಃಪೂರ್ವಕವಾಗಿ ಅಭಿನಂದನೆಗಳು. ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿದ್ದಕ್ಕೆ ಅಭಿನಂದನೆಗಳು ಎಂದು ಹೇಳಿದರು.

ಭಾರತ್ ಜೋಡೋ ಯಾತ್ರೆಯಿಂದ ದ್ವೇಷ ಸೋತಿದೆ, ಪ್ರೀತಿ ಗೆದ್ದಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ವಿಜಯ ಸಾಧಿಸಿದ ಬಳಿಕ, ಗೆಲುವಿಗೆ ನಾನಾ ರೀತಿಯ ಕಾರಣಗಳನ್ನು ಹೇಳಲಾಯಿತು. ಹಲವು ವಿಶ್ಲೇಷಣೆಗಳನ್ನು ಮಾಡಲಾಯಿತು. ಈ ಗೆಲುವಿಗೆ ನಿಜವಾದ ಕಾರಣ, ಬಡವರು, ದಲಿತರು,



ಆದಿವಾಸಿಗಳು ಮತ್ತು ಹಿಂದುಳಿದವರ ಜೊತೆಗೆ ನಿಂತಿದ್ದಾಗಿದೆ.

ಇದರಿಂದಾಗಿಯೇ ಕಾಂಗ್ರೆಸ್ ವಿಜಯ ಸಾಧಿಸಿದೆ. ನಾವು ಸತ್ಯವನ್ನು ನಂಬಿದ್ದೇವೆ. ಬಿಜೆಪಿ ಬಳಿ ಹಣ, ಪೊಲೀಸ್ ಹಾಗೂ ಎಲ್ಲಾ ರೀತಿಯ ಬಲವೂ ಇತ್ತು. ಆದ–'ರೆ, ಆ ಶಕ್ತಿಯನ್ನು ಕರ್ನಾಟಕದ ಜನತೆ ಸೋಲಿಸಿದ್ದಾರೆಂದು ತಿಳಿಸಿದರು.

ಚುನಾವಣೆ ವೇಳೆ ನಾವು ನಿಮಗೆ 5 ಭರವಸೆಗಳನ್ನು ನೀಡಿದ್ದೆವು. ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಮಹಿಳೆಯ–ರಿಗೆ ಉಚಿತ ಬಸ್ ಪ್ರಯಾಣ, ಯುವನಿಧಿ ಗ್ಯಾರಂಟಿಗಳನ್ನು ನಾವು ನೀಡಿದ್ದೆವು. ಅವುಗಳನ್ನು ಈಡೇ–ರಿಸುತ್ತೇವೆ.

ಸುಳ್ಳು ಭರವಸೆಗಳನ್ನು ನಾವು ನೀಡಿಲ್ಲ. ನುಡಿದಂತೆ ನಡೆಯುತ್ತೇವೆ. 1–2 ಗಂಟೆಗಳಲ್ಲಿ ರಾಜ್ಯ ಮೊದಲ ಸಂಪುಟ ಸಭೆ ನಡೆಯಲಿದೆ.

ಆ ಸಭೆಯಲ್ಲಿ 5 ಗ್ಯಾರಂಟಿಗಳನ್ನು ಜಾರಿಗೆ ತರಲಾಗುತ್ತದೆ. ರಾಜ್ಯ ಜನತೆಗೆ ಸ್ವಚ್ಛ, ಭ್ರಷ್ಟಾಚಾರ ರಹಿತ ಸರ್ಕಾರವನ್ನು ನೀಡುತ್ತೇವೆ. ಜನರು ಪ್ರೀತಿ, ಶಕ್ತಿ ಕಾಂಗ್ರೆಸ್ಗೆ ನೀಡಿದ್ದನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಮೊದಲ ಸಂಪುಟ ಸಭೆಯಲ್ಲಿಯೇ ಗ್ಯಾರಂಟಿಗಳನ್ನು ಜಾರಿ ಮಾಡುತ್ತೇವೆ. ಹಿಂದಿನ ಸರ್ಕಾರದಲ್ಲೂ ನಾವು ಅಭಿವೃದ್ಧಿ ಕೆಲಸ ಮಾಡಿದ್ದೇವೆ. ನುಡಿದಂತೆ ನಾವು ನಡೆಯುತ್ತೇವೆ ಎಂದರು.

## ಸಿದ್ದು–ಡಿಕೆ ಪಟ್ಟಾಭಿಷೇಕಕ್ಕೆ ತಾರಾ ಮೆರುಗು

ನಟ ಶಿವರಾಜ್ ಕುಮಾರ್, ತಮಿಳಿನ ಖ್ಯಾತ ನಟ ಕಮಲ್ ಹಾಸನ್, ಸ್ಯಾಂಡಲ್ ವುಡ್ ಕ್ವೀನ್ ರಮ್ಯಾ, ನಟಿ ನಿಶ್ವಿಕಾ ನಾಯ್ಡು, ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ನಟರಾದ ಸಾಧು ಕೋಕಿಲಾ, ದುನಿಯಾ ವಿಜಯ್, ಹಿರಿಯ ನಟಿ ಉಮಾಶ್ರೀ ಸೇರಿದಂತೆ ಹಲವರು ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು.

ಈ ಬಾರಿ ಚುನಾವಣೆಯಲ್ಲೂ ಶಿವರಾಜ್ ಕುಮಾರ್, ದುನಿಯಾ ವಿಜಯ್, ಸಾಧುಕೋಕಿಲಾ, ನಿಶ್ವಿಕಾ ನಾಯ್ಡು, ರಮ್ಯಾ ಸೇರಿದಂತೆ ಹಲವರು ಪ್ರಚಾರದಲ್ಲೂ ಪಾಲ್ಗೊಂಡಿದ್ದರು. ಕೆಲವರು ಸಿದ್ದರಾಮಯ್ಯನವರ ಪರವಾಗಿ ಪ್ರಚಾರದಲ್ಲಿ ತೊಡಗಿದ್ದರೆ, ಇನ್ನೂ ಹಲವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿದ್ದರು.

ಇಂತಹ ಐತಿಹಾಸಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕಮಲ್ ಹಾಸನ್ ಬಂದಿದ್ದು ವಿಶೇಷವಾಗಿತ್ತು. ಈ ಹಿಂದೆ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಭಾರತ್ ಜೋಡೋ ಯಾತ್ರೆಯಲ್ಲೂ ಕಮಲ್ ಭಾಗಿಯಾಗಿದ್ದರು. ಈ ಯಾತ್ರೆಗೆ ಅವರು ಬೆಂಬಲವನ್ನೂ ಸೂಚಿಸಿದ್ದರು

## ಸಿದ್ದು ಸಿಎಂ ಖುಷಿಗೆ ಇಂದಿರಾ ಕ್ಯಾಂಟೀನ್‌ನಲ್ಲಿ ಹೋಳಿಗೆ ಊಟ



ಧಾರವಾಡ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಅವರ ಅಭೀಮಾನಿಗಳು ರಾಜ್ಯಾದ್ಯಂತ ಸಿಹಿಯೂಟ ಆಯೋಜನೆ ಮಾಡಿದ್ದಾರೆ. ಅದರಲ್ಲೂ ಪ್ರಮುಖವಾಗಿ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಚಿತ ಹೋಳಿಗೆ ಊಟ ನೀಡಲಾಯಿತು.

ನಗರದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಬೆಳಗ್ಗಿನ ಉಪಾಹಾರದ ಜತೆಗೆ ಡಾ.ಮಯೂರ ಮೋರೆ ಹಾಗೂ ಸಿದ್ದರಾಮಯ್ಯ ಅಭಿಮಾನಿಗಳ ಬಳಗದಿಂದ ಹೋಳಿಗೆ ವಿತರಣೆ ನಡೆದಿದೆ. ಧಾರವಾಡ ಮಿನಿವಿಧಾನಸೌಧ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಬೆಳಗಿನ ಉಪಹಾರದ ಜತಗೆ ಹೋಳಿಗೆ ನೀಡಲಾಗುತ್ತಿದೆ. ಧಾರವಾಡ–ಹುಬ್ಬಳ್ಳಿ ದಕ್ಷಿಣ ಕನ್ನಡ, ಬಾಗಲಕೋಟೆ ಸೇರಿ ಮೂರು ಜಿಲ್ಲೆಗಳಲ್ಲಿ 17 ಕ್ಯಾಂಟೀನ್ ಗಳಲ್ಲಿ ಹೊಳಿಗೆ ವಿತರಣೆ ಮಾಡಲು ಪ್ಲ್ಯಾನ್ ಮಾಡಲಾಗಿದೆ. ಇದಕ್ಕಾಗಿ 9 ಸಾವಿರ ಹೋಳಿಗೆ ಸಿದ್ಧಪಡಿಸಲಾಗಿತ್ತು.

## ನಮ್ಮಲ್ಲಿ ಯಾವುದೇ ಬಣ ಇಲ್ಲ, ಹಿರಿತನ ನೋಡಿ ಹಂಚಿಕೆ: ಎಂ.ಬಿ. ಪಾಟೀಲ್



ಬೆಂಗಳೂರು: ಕಾಂಗ್ರೆಸ್ ಹೈಕಮಾಂಡ್ ಹಿರಿತನ ನೋಡಿ ಮಂತ್ರಿ ಸ್ಥಾನಗಳನ್ನು ಹಂಚಿಕೆ ಮಾಡಲಿದ್ದು ನಮ್ಮಲ್ಲಿ ಯಾವುದೇ ಬಣ ಇಲ್ಲ ಎಂದು ಕಾಂಗ್ರೆಸ್ ನಾಯಕ ಎಂಬಿ ಪಾಟೀಲ್ ಹೇಳಿದ್ದಾರೆ.

ಇದೇ ಖಾತೆ ಬೇಕು ಎಂದು ನಾನು ಬೇಡಿಕೆ ಇಡುವುದಿಲ್ಲ. ಹೈಕಮಾಂಡ್ ಅಳೆದು ತೂಗಿ ಸ್ಥಾನವನ್ನು ಹಂಚಿಕೆ ಮಾಡಿದೆ. ಸಿಎಂ ಯಾವ ಖಾತೆ ಕೊಡುತ್ತಾರೋ ಅದನ್ನು ನಿಭಾಯಿಸುತ್ತೇನೆ ಎಂದು ತಿಳಿಸಿದರು.

ಲಿಂಗಾಯತರಿಗೆ ಡಿಸಿಎಂ ಸ್ಥಾನ ನೀಡುವ ವಿಚಾರವಾಗಿ ಕೇಳಲಾದ ಪ್ರಶ್ನೆಗೆ, ಮುಸ್ಲಿಮರು, ಲಿಂಗಾಯತರು ಅತಿ ಹೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ಕೊಟ್ಟಿದ್ದಾರೆ. ಸಮುದಾಯದ ಆಶಯ ಇರುವುದು ಸಹಜ. ಹೈಕಮಾಂಡ್ ಈ ಬಗ್ಗೆ ಯೋಚನೆ ಮಾಡಲಿದೆ. 4 ವರ್ಷದಲ್ಲಿ ಬಿಜೆಪಿ ಎಲ್ಲವನ್ನೂ ಹಾಳು ಮಾಡಿದ್ದು ಇದನ್ನ ಸರಿ ಮಾಡುವ ಕೆಲಸ ಮಾಡುತ್ತೇವೆ ಎಂದರು.

ಗ್ಯಾರಂಟಿ ಯೋಜನೆಗಳಿಗೆ ಷರತ್ತುಗಳು ಇದೆಯೇ ಎಂದು ಕೇಳಿದ್ದಕ್ಕೆ, ಗ್ಯಾರಂಟಿ ಯೋಜನೆಗಳ ಷರತ್ತುಗಳ ಬಗ್ಗೆ ನಾನು ಈಗ ಹೇಳುವುದಿಲ್ಲ. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಜನರಿಗೆ ಕೊಟ್ಟ ಮಾತು ಈಡೇ–ರಿಸುತ್ತೇವೆ ಎಂದು ತಿಳಿಸಿದರು.



## ಸರ್ಕಾರ ಕೈಗೊಳ್ಳುವ ಪ್ರತಿಯೊಂದು ಕ್ರಮಕ್ಕೂ ಜೆಡಿಎಸ್ ಪರಿಪೂರ್ಣ ಬೆಂಬಲ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಕ್ಕೆ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಶುಭಾಶಯ ಕೋರಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹಾಗೂ ಅವರ ಸಂಪುಟ ಸಹೋದ್ಯೋಗಿಗಳಿಗೆ ಶುಭ ಹಾರೈಸಿದ್ದಾರೆ.

ರಾಜ್ಯದ ಜನತೆಗೆ ಅರ್ಪಣಾ ಮನೋಭಾವದಿಂದ ಅವರೆಲ್ಲರೂ ಸೇವೆ ಮಾಡಲಿ. ಕನ್ನಡನಾಡಿನ ಜನಹಿತಕ್ಕಾಗಿ ಕಾಂಗ್ರೆಸ್ ಸರಕಾರ ಕೈಗೊಳ್ಳುವ ಪ್ರತಿಯೊಂದು ಕ್ರಮಕ್ಕೂ ಜೆಡಿಎಸ್ ಪಕ್ಷ ಪರಿಪೂರ್ಣ ಬೆಂಬಲ ನೀಡಲಿದೆ ಎಂದು ಅವರು ತಿಳಿಸಿದ್ದಾರೆ.



## ಸಂಪುಟ ದರ್ಜೆ ಸಚಿವರಾಗಿ ಸತೀಶ ಜಾರಕಿಹೊಳಿ ಪ್ರಮಾಣವಚನ ಸ್ವೀಕಾರ

ಬೆಂಗಳೂರು: ರಾಜ್ಯದಲ್ಲಿ ಇಂದು ನೂತನ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಸಿಎಂ ಆಗಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಹಾಗು ಬೆಳಗಾವಿಯ ಜಿಲ್ಲೆಯ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಉತ್ತರ ಕರ್ನಾಟಕದಲ್ಲಿಯೇ ಅತಿಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಸಕ್ಕರೆ ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಚಂಡ ವಿಜಯ ಸಾಧಿಸಿರುವುದರಿಂದ ಬಿಜೆಪಿ ಧೂಳಿಪಟವಾಗಿದ್ದು, 18 ಸ್ಥಾನಗಳಲ್ಲಿ 11 ಸ್ಥಾನಗಳನ್ನು ಕಾಂಗ್ರೆಸ್ ಪಡೆದುಕೊಂಡಿದ್ದಾರೆ.




## ವಾರೆಂಟಿ ಅವಧಿ ಪ್ರಾರಂಭಕ್ಕೆ ಮುನ್ನವೇ ಪ್ರಣಾಳಿಕೆಯಲ್ಲಿ ನೀಡಿದ ಐದೂ ಗ್ಯಾರೆಂಟಿಗಳ ಜಾರಿ

ಬೆಂಗಳೂರು: ಚುನಾವಣಾ ಪೂರ್ವದಲ್ಲಿ ತನ್ನ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಗೆ ನೀಡಿದ ಗ್ಯಾರೆಂಟಿ ( ಭರವಸೆ ) ಗಳನ್ನು ತನ್ನ ಅಧಿಕಾರ ( ವಾರಂಟಿ ) ಅವಧಿ ಪ್ರಾರಂಭವಾಗುವ ಮುನ್ನವೇ ಜಾರಿಗೆ ತರುವಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತೀರ್ಮಾನಿಸಿದೆ.

ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ನಡೆದ ಮೊದಲ ಸಚಿವ ಸಂಪುಟ ಸಭೆಯ ಅಧ್ಯಕ್ಷತೆ ವಹಿಸಿ ತನ್ನ ಸಹೋದ್ಯೋಗಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದ ನಂತರ ಸಿದ್ದರಾಮಯ್ಯ ಅವರು ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಚಿವ ಸಂಪುಟದ ತೀರ್ಮಾನಗಳನ್ನು ಬಹಿರಂಗಪಡಿಸಿದರು.

**ಗೃಹ ಜ್ಯೋತಿ ಯೋಜನೆ :**

ಈ ಯೋಜನೆಯಡಿ ಗೃಹ ಬಳಕೆದಾರರಿಗೆ 200 ಯೂನಿಟ್ ಉಚಿತ ವಿದ್ಯುತ್



**ಗೃಹ ಲಕ್ಷ್ಮೀ ಯೋಜನೆ ;**

ಈ ಯೋಜನೆಯಡಿ ಮನೆಯೊಡತಿಗೆ ಪ್ರತಿ ಮಾಹೆ 2000 ರೂ. ಈ ಯೋಜನೆಗೆ 1200 ಕೋಟಿ ರೂ ವೆಚ್ಚವಾಗುತ್ತದೆ.

**ಅನ್ನಭಾಗ್ಯ ಯೋಜನೆ :**

ಬಡತನ ರೇಖೆಗಿಂತಲೂ ಕೆಳಗಿರುವ ಪಡಿತರ ಚೀಟಿ ಹೊಂದಿರುವ ಕುಟುಂಬಗಳಿಗೆ ಪ್ರತಿ ಸದಸ್ಯರಿಗೆ ಹತ್ತು ಕೆ ಜಿ ಅಕ್ಕಿ

**ಯುವ ನಿಧಿ ನಿರುದ್ಯೋಗ ಭತ್ಯೆ ಯೋಜನೆ :**

ಪದವಿ, ಸ್ನಾತಕೋತ್ತರ ಪದವಿ, ಪಿ ಹೆಚ್ ಡಿ ಪಡೆದವರಿಗೆ ಮೊದಲ ಎರಡು ವರ್ಷಗಳು ಅಥ–'ವಾ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ದೊರೆಯುವವರೆಗೆ ಮಾಸಿಕ 3000 ರೂ ಭತ್ಯೆ, ಡಿಪ್ಲೋಮಾ ಹೊಂದಿರುವವರಿಗೆ ಮಾಸಿಕ 1500 ರೂ ಭತ್ಯೆ.

**ಮಹಿಳೆಯರಿಗೆ ಉಚಿತ ಬಸ್ ಪಾಸ್ :**

ಸರ್ಕಾರಿ ಬಸ್ ಗಳಲ್ಲಿ ಮಹಿಳೆಯರ ಉಚಿತ ಸಂಚಾರಕ್ಕೆ ಅವಕಾಶ.

ಈ ಎಲ್ಲಾ ಯೋಜನೆಗಳ ಅನುಷ್ಠಾನಕ್ಕೆ , ರಾಜ್ಯ ಸಚಿವ ಸಂಪುಟ ತಾತ್ವಿಕ ಒಪ್ಪಿಗೆ ನೀಡಿದೆ. ಅಲ್ಲದೆ, ಸರ್ಕಾರಿ ಆದೇಶಗಳನ್ನು ಹೊರಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಈ ಎಲ್ಲಾ ಯೋಜನೆಗಳ ಜಾರಿಗೆ 50,000 ಕೋಟಿ ರೂ ಅಗತ್ಯವಿದೆ. ಎಷ್ಟೇ ಕಷ್ಟ ಎದುರಾದರೂ ಜನತೆಗೆ ನೀಡಿದ ಈ ಭರವಸೆಗಳನ್ನು ಜಾ–ರಿಗೊಳಿಸಲಾಗುವುದು ಎಂದು ಸಿದ್ದರಾಮಯ್ಯ ಪುನರುಚ್ಚ–ರಿಸಿದರು. ಈ ಗ್ಯಾರೆಂಟಿಗಳ ಬಗ್ಗೆ ಸಚಿವ ಇಂದಿನ ಸಂಪುಟದಲ್ಲಿ ತೀರ್ಮಾನಿಸಲಾಗಿದೆಯಾದರೂ– ಅಂಕಿ–ಅಂಶಗಳ ನಿಖರ ಮಾಹಿತಿ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಮುಂದಿನ ವಾರ ನಡೆಯಲಿರುವ ಸಚಿವ ಸಂಪುಟದ ವೇಳೆಗೆ ಗ್ಯಾರಂಟಿಗಳ ಜಾರಿ ಗ್ಯಾರೆಂಟಿ !

ಕಳೆದ ಬಾರಿ 2013 ರಿಂದ 2018 ರವರೆಗಿನ ಅವಧಿಯಲ್ಲಿನ ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇದಲ್ಲದೆ, ಇಂದಿರಾ ಕ್ಯಾಂಟೀನ್ ಸೇರಿದಂತೆ 30 ಅಪ್ರಕಟಿ–ತ ಭರವಸೆಗಳನ್ನೂ ಜಾ–ರಿಗೊಳಿಸಲಾಗಿದೆ.

ಕರ್ನಾಟಕದಿಂದ ನಾಲ್ಕು ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಮೊತ್ತ ಸಂಗ್ರಹವಾದರೂ, ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದೂ ಕರ್ನಾಟಕಕ್ಕೆ ನ್ಯಾಯಯುತವಾಗಿ ದೊರೆಯಬೇಕಾದ ಪಾಲು ದೊರೆಯಲಿಲ್ಲ ಎಂಬ ಅಂಶವನ್ನು ಹೊರಹಾಕಿದ ಮುಖ್ಯಮಂತ್ರಿ ರಾಜಸ್ವ ಸಂಗ್ರಹಣೆಯಲ್ಲಿ ಕಠಿಣ–ತೆ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಗೂ ಇನ್ನಿತರ ಆಡಳಿತ ಕ್ರಮಗಳನ್ನು ಜಾರಿಗೆ ತಂದು ಜನತೆಗೆ ಕೊಟ್ಟ ಮಾತಿನಂತೆ ಈ ಎಲ್ಲಾ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು ಎಂದೂ ಅವರು ಹೇಳಿದರು.

# ರಾಜಸ್ಥಾನ: ಸರ್ಕಾರದ 'ಯೋಜನಾ ಭವನ'ದ ನೆಲಮಾಳಿಗೆಯಲ್ಲಿ 2.31 ಕೋಟಿ ರೂ. ನಗದು ಹಣ, ಒಂದು ಕೆಜಿ ಚಿನ್ನ ಪತ್ತೆ

ಜೈಪುರ: ರಾಜಸ್ಥಾನದ ಸೆಕ್ರೆಟರಿಯೇಟ್ ಬಳಿ ಇರುವ ಯೋಜನಾ ಭವನದಲ್ಲಿ ಶುಕ್ರವಾರ ರಾತ್ರಿ ಕೋಟ್ಯಂತರ ರೂಪಾಯಿ ನಗದು ಮತ್ತು 1 ಕೆಜಿ ಚಿನ್ನಾಭರಣ ಸಿಕ್ಕಿದ್ದು ದೊಡ್ಡ ಪ್ರಕರಣ ಬೆಳಕಿಗೆ ಬಂದಿದೆ.

ಯೋಜನಾ ಭವನದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ಕಡತಗಳನ್ನು ಡಿಜಿಟಲೀಕರಣ ಗೊಳಿಸುವ ಕಾರ್ಯ ನಡೆಯುತ್ತಿದೆ. ಇದೇ ವೇಳೆ ಯೋಜನಾ ಭವನದ ನೆಲಮಾಳಿಗೆಯಲ್ಲಿ ಹಲವು ದಿನಗಳಿಂದ ಮುಚ್ಚಿದ್ದ ಕಬೋರ್ಡ್ ನಿಂದ 2 ಕೋಟಿ 31 ಲಕ್ಷ 49 ಸಾವಿರದ 500 ರೂ. ಇದರೊಂದಿಗೆ ಒಂದು ಕೆಜಿ ಚಿನ್ನದ ಬಿಸ್ಕತ್ ಸಿಕ್ಕಿದ್ದು ಸಂಚಲನ ಮೂಡಿಸಿದೆ.

ಇಷ್ಟು ದೊಡ್ಡ ಮೊತ್ತ ಮತ್ತು ಚಿನ್ನವನ್ನು ಸರ್ಕಾರಿ ಕಚೇರಿಯಲ್ಲಿ ಪಡೆದ ನಂತರ, ಆಡಳಿತ ಮತ್ತು ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾದರು.



ಪ್ರಕರಣವನ್ನು ಬಹಿರಂಗಪಡಿಸಿದ ನಂತರ, ಮುಖ್ಯ ಕಾರ್ಯದರ್ಶಿ ಉಷಾ ಶರ್ಮಾ, ಡಿಜಿಪಿ ಉಮೇಶ್ ಮಿಶ್ರಾ, ಎಡಿಜಿ ಕ್ರೈಂ ದಿನೇಶ್ ಎಂಎನ್ ಮತ್ತು ಪೊಲೀಸ್ ಕಮಿಷನರ್ ಆನಂದ್ ಶ್ರೀವಾಸ್ತವ ಅವರು ಕಿರು ಸೂಚನೆ ಮೇರೆಗೆ ಸೆಕ್ರೆಟರಿಯೇಟ್‌ನಲ್ಲಿ ಸುದ್ದಿಗೋಷ್ಠಿ ಕರೆದರು.

ಜೈಪುರದಲ್ಲಿ ರಾತ್ರಿ 11 ಗಂಟೆಗೆ ಪೊಲೀಸ್ ಕಮಿಷನರ್ ಆನಂದ್ ಶ್ರೀವಾಸ್ತವ ಅವರು ಯೋಜನಾ ಭವನದಲ್ಲಿರುವ ಡಿಒಐಟಿ ವಿಭಾಗದ ನೆಲಮಾಳಿಗೆಯಿಂದ ಈ ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪಿಸಿ ಹೇಳಿದರು.

ಈ ಮೊತ್ತ ಮತ್ತು ಚಿನ್ನವನ್ನು ಆಧಾರ್ ಕಾರ್ಡ್‌ಗಳ ಕೆಲಸವನ್ನು ನಿರ್ವಹಿಸುವ ಯುಐಡಿ ವಿಭಾಗದ ಕಬೋರ್ಡ್‌ನಲ್ಲಿ ಇರಿಸಲಾಗಿತ್ತು. ಲ್ಯಾಪ್‌ಟಾಪ್ ಬ್ಯಾಗ್ ಮತ್ತು ಟ್ರಾಲಿ ಸೂಟ್‌ಕೇಸ್‌ನಿಂದ ಈ ಹಣ ಮತ್ತು ಚಿನ್ನ ಹೊರಬಂದಿದೆ. ಇದರಲ್ಲಿ 500 ಮತ್ತು 2000 ರೂಪಾಯಿ ನೋಟುಗಳು ಮತ್ತು ಚಿನ್ನದ ಬಿಸ್ಕೆಟ್ ಪತ್ತೆಯಾಗಿದೆ. ಎಲ್ಲಾ ನೋಟುಗಳು ಹಳೆಯವು ಅಂದರೆ ಹೊಸ ಬಂಡಲ್‌ಗಳ ಬದಲಿಗೆ ಬಳಸಿದ ನೋಟುಗಳ ಕಟ್ಟುಗಳಾಗಿವೆ.

ಪೊಲೀಸ್ ಕಮಿಷನರ್ ಆನಂದ್ ಶ್ರೀವಾಸ್ತವ ಮಾತನಾಡಿ, ಸೆಕ್ರೆಟರಿಯೇಟ್ ನಲ್ಲಿ ಕಡತಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣ ಮಾಡುವ ಕಾರ್ಯ ನಡೆಯುತ್ತಿದೆ. ಇದರ ಅಡಿಯಲ್ಲಿ, ಡಿಒಐಟಿಯ ಯುಐಟಿ ವಿಭಾಗದ ಫೈಲ್ ಅನ್ನು ಸಹ ಸ್ಕ್ಯಾನ್ ಮಾಡಬೇಕಾಗಿತ್ತು. ನೂರಾರು ಕ್ಯಾಬಿನೆಟ್‌ಗಳಲ್ಲಿ ಇರಿಸಲಾದ ಫೈಲ್‌ಗಳನ್ನು ಸ್ಕ್ಯಾನ್ ಮಾಡಲಾಗಿದೆ.

ಏತನ್ಮಧ್ಯೆ, ಯುಐಟಿ ವಿಭಾಗದ ನೆಲಮಾಳಿಗೆಯಲ್ಲಿ ಇರಿಸಲಾದ ಎರಡು ಕ್ಯಾಬಿನೆಟ್‌ಗಳ ಕೀಗಳು ಹಲವು ದಿನಗಳಿಂದ ಪತ್ತೆಯಾಗಿಲ್ಲ. ಶುಕ್ರವಾರ ಈ ಅಲ್ಮೇರಾಗಳ ಬೀಗವನ್ನು ಹೊಸ ಕೀಗಳನ್ನು ತಯಾರಿಸಿ ತೆರೆದಾಗ ಇಷ್ಟು ದೊಡ್ಡ ಮೊತ್ತ ಹಾಗೂ ಚಿನ್ನ ಪತ್ತೆಯಾಗಿದೆ ಎಂದರು.

ಒಂದು ಕಬೋರ್ಡ್ ನಲ್ಲಿ ಫೈಲ್‌ಗಳು, ಇನ್ನೊಂದರಲ್ಲಿ ಹಣ, ಚಿನ್ನದ ಬಿಸ್ಕೆಟ್ ಪತ್ತೆ

ಕ್ಯಾಬಿನೆಟ್‌ಗಳನ್ನು ತೆರೆದಾಗ ಒಂದು ಕ್ಯಾಬಿನೆಟ್‌ನಿಂದ ಫೈಲ್‌ಗಳು ಸಿಕ್ಕಿದ್ದು ಮತ್ತೊಂದರಲ್ಲಿ ಲ್ಯಾಪ್‌ಟಾಪ್ ಬ್ಯಾಗ್ ಮತ್ತು ಟ್ರಾಲಿಯೊಂದಿಗೆ ಸೂಟ್‌ಕೇಸ್ ಇದ್ದವು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ನಾನು ಅವುಗಳನ್ನು ತೆರೆದಾಗ, ಅದರಿಂದ ಈ ಮೊತ್ತ ಪತ್ತೆಯಾಗಿದೆ. ಡಿಒಐಟಿಯ ಹೆಚ್ಚುವರಿ ನಿರ್ದೇಶಕ ಮಹೇಶ್ ಗುಪ್ತಾ ಅವರು ಮೊದಲು ಮುಖ್ಯ ಕಾರ್ಯದರ್ಶಿ ಮತ್ತು ನಂತರ ಪೊಲೀಸರಿಗೆ ಮಾಹಿತಿ ನೀಡಿದರು. ಪೊಲೀಸರು ಸಂಪೂರ್ಣ ತನಿಖೆ ಆರಂಭಿಸಿದ್ದಾರೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ಯಾರು ಎಂಬುದು ಇನ್ನೂ ಬಹಿರಂಗವಾಗಿಲ್ಲ ಎಂದು ಆನಂದ್ ಶ್ರೀವಾಸ್ತವ ಹೇಳಿದ್ದಾರೆ.

ಪೊಲೀಸರು 7–8 ನೌಕರರನ್ನು ವಿಚಾರಣೆ ಮಾಡುತ್ತಿದ್ದು ಇದರೊಂದಿಗೆ ಸಿಸಿಟಿವಿ ದೃಶ್ಯಾವಳಿಗಳನ್ನೂ ಶೋಧಿಸಲಾಗುತ್ತಿದೆ.

ಯಾವ ನೌಕರನಿಗೆ ಪ್ರವೇಶವಿದೆ ಮತ್ತು ಅದರ ನಿರ್ವಹಣೆ ಮತ್ತು ಕೀಗಳನ್ನು ಇಟ್ಟುಕೊಳ್ಳಲು ಯಾರು ಜವಾಬ್ದಾರರು ಎಂದು ಪೊಲೀಸರು ಈ ಅಂಶವನ್ನು ತನಿಖೆ ಮಾಡುತ್ತಿದ್ದಾರೆ.

ಆದರೆ, ಈ ವಿಚಾರದಲ್ಲಿ ದೊಡ್ಡ ಅಧಿಕಾರಿಯೊಬ್ಬರ ಕೈವಾಡವಿರಬಹುದು. ಈ ಅಂಶವನ್ನೂ ಗಮನದಲ್ಲಿಟ್ಟುಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಜಮ್ಮು–ಕಾಶ್ಮೀರ ವಿವಾದಿತ ಪ್ರದೇಶ ಎಂದ ಚೀನಾ: ಜಿ20 ಶೃಂಗ ಸಭೆ ಬಹಿಷ್ಕರಿಸಿದ ಡ್ರ್ಯಾಗನ್ ರಾಷ್ಟ್ರ



ನವದೆಹಲಿ: ಮೇ 22ರಿಂದ 24ರವರೆಗೆ ಕಾಶ್ಮೀರದಲ್ಲಿ ನಡೆಯಲಿರುವ ಜಿ–20 ಸಮ್ಮೇಳನದ ಬಗ್ಗೆ ಚೀನಾ ಉದ್ಧಟತನ ಪ್ರದರ್ಶಿಸಿದ್ದು, ಪಾಕಿಸ್ತಾನದೊಂದಿಗೆ ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ಚೀನಾ ಜಮ್ಮು ಕಾಶ್ಮೀರವನ್ನು ವಿವಾದಿತ ಪ್ರದೇಶ ಎಂದು ಕರೆದಿದ್ದು ಸಭೆಯನ್ನು ಬಹಿಷ್ಕರಿಸಿದೆ.

ಚೀನಾ ಈಗ ಮುಂದಿನ ವಾರ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯಲಿರುವ ಜಿ20 ಪ್ರವಾಸೋದ್ಯಮ ವರ್ಕಿಂಗ್ ಗ್ರೂಪ್ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದೆ.

ವಿವಾದಿತ ಪ್ರದೇಶ'ವಾಗಿರುವ ಕಾಶ್ಮೀರದಲ್ಲಿ ಇಂತಹ ಸಭೆಗಳನ್ನು ನಡೆಸುವುದನ್ನು ಚೀನಾ "ದೃಢವಾಗಿ ವಿರೋಧಿಸುತ್ತದೆ" ಎಂದು ಚೀನಾದ ವಿದೇಶಾಂಗ ಸಚಿವಾಲಯವನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ಪಿಟಿಐ ವರದಿ ಮಾಡಿದೆ. ಭಾರತವು ಮೇ 22 ರಿಂದ 24 ರವರೆಗೆ ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಮೂರನೇ ಜಿ 20 ಪ್ರವಾಸೋದ್ಯಮ ವರ್ಕಿಂಗ್ ಗ್ರೂಪ್ ಸಭೆಯನ್ನು ಆಯೋಜಿಸಲಿದೆ.

**ಕಾಶ್ಮೀರದಲ್ಲಿ ನಡೆದ ಜಿ–20 ಶೃಂಗಸಭೆಯಿಂದ ಜಗತ್ತಿಗೆ ಸಂದೇಶ**

ಶ್ರೀನಗರದಲ್ಲಿ ನಡೆಯಲಿರುವ ಜಿ20 ಸಭೆಯು ಜಮ್ಮು ಮತ್ತು ಕಾಶ್ಮೀರಕ್ಕೆ ತನ್ನ ನಿಜವಾದ ಸಾಮರ್ಥ್ಯವನ್ನು ತೋರಿಸಲು ಉತ್ತಮ ಅವಕಾಶವಾಗಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಬುಧವಾರ ಹೇಳಿದ್ದಾರೆ. ಶ್ರೀನಗರದಲ್ಲಿ ನಡೆಯಲಿರುವ ಇಂತಹ ಅಂತರಾಷ್ಟ್ರೀಯ ಕಾರ್ಯಕ್ರಮ ದೇಶಕ್ಕೆ ಮತ್ತು ಜಗತ್ತಿಗೆ ಸಕಾರಾತ್ಮಕ ಸಂದೇಶವನ್ನು ನೀಡುತ್ತದೆ ಎಂದು ಹೇಳಿದರು.

**ಪಾಕಿಸ್ತಾನವೂ ಪ್ರತಿಭಟನೆ ನಡೆಸಿದೆ**

ಜಮ್ಮು ಮತ್ತು ಕಾಶ್ಮೀರದಲ್ಲಿ ಜಿ20 ಸಭೆ ನಡೆಸುವ ಭಾರತದ ನಿರ್ಧಾರವನ್ನು ಪಾಕಿಸ್ತಾನವೂ ವಿರೋಧಿಸಿದೆ. ಭಾರತ ತನ್ನ ನೆರೆಯ ರಾಷ್ಟ್ರದ ಆಕ್ಷೇಪಗಳನ್ನು ತಿರಸ್ಕರಿಸಿದೆ. ಶೃಂಗಸಭೆಯಿಂದ ಹೊರಗುಳಿಯುವ ಚೀನಾದ ನಿರ್ಧಾರವು ಅದರ ನಿಕಟ ಮಿತ್ರರಾಷ್ಟ್ರ ಪಾಕಿಸ್ತಾನದ ಆಕ್ಷೇಪಣೆಗಳಿಗೆ ಸಂಬಂಧಿಸಿದೆ ಮತ್ತು ಮಾರ್ಚ್‌ನಲ್ಲಿ ಅರುಣಾಚಲ ಪ್ರದೇಶದಲ್ಲಿ ನಡೆದ ಜಿ 20 ಸಭೆಯಲ್ಲಿ ಭಾಗವಹಿಸದ ನಂತರ ಬಂದಿದೆ.

**ಭಾರತದ ವಿರುದ್ಧ ಚೀನಾ–ಪಾಕ್ ಪಿತೂರಿ**

ಈ ತಿಂಗಳ ಆರಂಭದಲ್ಲಿ, ಚೀನಾ ಮತ್ತು ಪಾಕಿಸ್ತಾನ, ಎರಡೂ ನಿಕಟ ಮಿತ್ರರಾಷ್ಟ್ರಗಳು ಜಂಟಿ ಹೇಳಿಕೆಯಲ್ಲಿ ದೀರ್ಘಕಾಲದ ವಿವಾದವನ್ನು ಎತ್ತಿದವು ಮತ್ತು ಕಾಶ್ಮೀರ ಸಮಸ್ಯೆಯನ್ನು ಯುಎನ್ ಚಾರ್ಟರ್, ಸಂಬಂಧಿತ ಭದ್ರತಾ ಮಂಡಳಿಯ ನಿರ್ಣಯಗಳು ಮತ್ತು ದ್ವಿಪಕ್ಷೀಯ ಒಪ್ಪಂದಗಳ ಅಡಿಯಲ್ಲಿ ಪರಿಹರಿಸಬೇಕು ಎಂದು ತಮ್ಮ ನಿಲುವನ್ನು ಪುನರುಚ್ಚರಿಸಿದರು. ಅದಕ್ಕೆ ಅನುಗುಣವಾಗಿ ಸರಿಯಾಗಿ ಮತ್ತು ಶಾಂತಿಯುತವಾಗಿ ಪರಿಹರಿಸಲಾಗಿದೆ.

# ಸಂಭ್ರಮದಿಂದ ನಡೆದ ಶ್ರೀ ಎರ್ರಿತಾತನವರ ಜೀವಸಮಾಧಿ ಶತಮಾನೋತ್ಸವ

ಬಳ್ಳಾರಿ: ತಾಲ್ಲೂಕಿನ ಸುಕ್ಷೇತ್ರ ಚೇಳ್ಳಗುರ್ಕಿಯಲ್ಲಿ ಪವಾಡ ಪುರುಷ ಶ್ರೀ ಎರ್ರಿತಾತನವರ ಜೀವ ಸಮಾಧಿ ಶತಮಾನೋತ್ಸವ ಹಾಗೂ ಜಾತ್ರಾ ಮಹೋತ್ಸವದ ಪ್ರಯುಕ್ತ ಶನಿವಾರ ಬೆಳಗ್ಗೆ 5:30ಕ್ಕೆ ಗಂಗೆ ತಂದು 6:30 ರಿಂದ ಹೋಮದೊಂದಿಗೆ ವಿಶೇಷ ಪೂಜೆಗೆ ಮಠದ ಆವರಣದಲ್ಲಿ ಶ್ರೀ ಎರ್ರಿಸ್ವಾಮಿ ಜೀವ ಸಮಾಧಿ ಟ್ರಸ್ಟ್ ಹಾಗೂ ಶ್ರೀ ಎರ್ರಿಸ್ವಾಮಿ ದಾಸೋಹ ಸೇವಾ ಸಂಘದಿಂದ ಸಡಗರ ಸಂಭ್ರಮದಿಂದ ನೆರವೇರಿತು.

ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಆರ್. ರಾಮನಗೌಡ ಉದ್ಘಾಟಿಸಿದರು. ನಂತರ ತಾತನವರ ಸ್ಮರಣ ಸಂಚಿಕೆ ಬಿಡುಗಡೆ ಗೊಳಿಸಲಾಯಿತು.

ರಾಮನ ಗೌಡ ಮಾತನಾಡುತ್ತಾ, ತಾತನ



ಆಶೀರ್ವಾದ ನಮ್ಮ ನಿಮ್ಮೆಲ್ಲರ ಮೇಲಿರಲಿ ಎಂದರು. ವಕೀಲ ತಿಪ್ಪಣ್ಣನವರು ಆಶಯ ನುಡಿಗಳನ್ನಾಡಿದರು.

ಇಪ್ಪತ್ತೆಂಟು ಗ್ರಾಮಗಳ ಭಜನೆ ತಂಡದ ಮುಖ್ಯಸ್ಥರುಗಳನ್ನು ಸನ್ಮಾನಿಸಲಾಯಿತು.

ಶತಮಾನೋತ್ಸವ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯವನ್ನು ಆಂಧ್ರಪ್ರದೇಶ ಉರವಕೊಂಡ ಗವಿಮಠದ ಶ್ರೀ ಜಗದ್ಗುರು ಚನ್ನಬಸವರಾಜೇಂದ್ರ ಮಹಾಸ್ವಾಮಿಗಳು,ಶ್ರೀ ಮ.ನಿ.ಪ್ರ.ಡಾ.ಕರಿಬಸವರಾಜೇಂದ್ರ ಮಹಾಸ್ವಾಮಿಗಳು, ಸಂಡೂರು ವಿರಕ್ತ ಮಠದ ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು, ಕಮ್ಮರಚೇಡಿನ ಕಲ್ಯಾಣ ಸ್ವಾಮಿ ಮಠದ ಶ್ರೀ ಮ.ನಿ.ಪ್ರ.ಕಲ್ಯಾಣ ಮಹಾಸ್ವಾಮಿಗಳು, ಕಲ್ಲುಹೊಳೆಮಠದ ತಪೋರತ್ನ ಶ್ರೀ ಷ.ಬ್ರ.ಚೆನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಹಂಪಿಯ ಹೇಮಕೂಟ ಆಶ್ರಮದ ಅವಧೂತ ಸ್ತೋ.ಪ್ರ.ವಿದ್ಯಾನಂದ ಭಾರತಿ ಸ್ವಾಮಿಗಳು ವಹಿಸಿದರೆ.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಟ್ರಸ್ಟ್ ಕಮಿಟಿ ಅಧ್ಯಕ್ಷ ಎಚ್. ಬಾಳನಗೌಡ ಹಾಗೂ ದಾಸೋಹ ಸೇವಾ ಸಂಘದ ಅಧ್ಯಕ್ಷ ಸಿ.ಕೆ.ಪೊಂಪನಗೌಡ ವಹಿಸುವರು.

ವೀರಶೈವ ವಿದ್ಯಾವರ್ಧಕ ಸಂಘದ ಮಾಜಿ ಅಧ್ಯಕ್ಷ ಉಡೇದ ಬಸವರಾಜ, ಶಾಂತನಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸೂರ್ಯ ಕಲಾತಂಡದವರಿಂದ ಹಾಗೂ ದೊಡ್ಡ ಬಸವಗವಾಯಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# 55ನೇ ವಸಂತದಲ್ಲಿ ಸನ್ಯಾಸ ಆಶ್ರಮ ಸ್ವೀಕರಿಸಿದ ಡಾ॥ಮಾನಕರಿ ಶ್ರೀನಿವಾಸಾಚಾರ್ಯ

ಬಳ್ಳಾರಿ: ಮೂಲತಃ ಅಖಂಡ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬಡೇಲಡಕು ಗ್ರಾಮದ ಡಾ.ಮಾನಕರಿ ಶ್ರೀನಿವಾಸಾಚಾರ್ಯರು ತಮ್ಮ ಸಾರ್ಥಕ 55ನೇ ವಸಂತದಲ್ಲಿ ಸನ್ಯಾಸ ಆಶ್ರಮ ಸ್ವೀಕರಿಸಲಿದ್ದು, ಭವಿತವ್ಯದ ಸಮ ಸಮಾಜಕ್ಕೆ ಸನ್ನಡತೆ ಹಾಗೂ ಸಾತ್ವಿಕತೆಯ ಮಾರ್ಗದರ್ಶನ ನೀಡಲು ಮುಂದಾಗಿದ್ದಾರೆ.

ಮಾನಕರಿ ಶ್ರೀನಿವಾಸಾಚಾರ್ಯರು ಬಳ್ಳಾರಿಯ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರು, ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜಿನ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದವರು. ಕನ್ನಡ ಮತ್ತು ವೈದಿಕ ಶಾಸ್ತ್ರೀಯ ವಿದ್ವಾಂಸರು, ಲೇಖಕರು, ಸಂಪಾದಕರು, ಸಂಶೋಧಕರು, ಕೃತಿಯಿಕಾರರು, ಸರಳ ಸಜ್ಜನ ಮೇಧಾವಿಗಳಾದ ಇವರು ಬಳ್ಳಾರಿಯ ಶ್ರೀ ಸತ್ಯನಾರಾಯಣ ಪೇಟೆ ನಿವಾಸಿಗಳು. ಶ್ರೀನಿವಾಸಾಚಾರ್ಯರು ತಮ್ಮ ಮುಖಪುಟದಲ್ಲಿ ಕೊನೆಯ ಸಂದೇಶವನ್ನು ರವಾನಿಸಿದ್ದಾರೆ. ಇದುವರೆಗಿನ ನನ್ನ 55 ವರ್ಷದ ಬದುಕಿನಲ್ಲಿ ಅಪಾರ ಪ್ರೀತಿ ತೋರಿ ನನ್ನ ಶ್ರೇಯಸ್ಸಿಗಾಗಿ ಹಾರೈಸಿದ ಎಲ್ಲ ಬಂಧುಗಳಿಗೆ, ನನ್ನ ಅಧ್ಯಾಪಕರಿಗೆ, ಪೋಷಕರಿಗೆ, ರಾಯಚೂರು ನಗರಗಳ ಎಲ್ಲಾ ಸಹೋದ್ಯೋಗಿ ಮಿತ್ರರಿಗೆ, ವಿದ್ಯಾರ್ಥಿ ಸಮುದಾಯಕ್ಕೆ, ಹಿತೈಷಿಗಳಿಗೆ ಮತ್ತು ಅಭಿಮಾನಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಾನು ಸನ್ಯಾಸ ಆಶ್ರಮ ಸ್ವೀಕರಿಸುತ್ತಿರುವ ಈ ಸಂದರ್ಭದಲ್ಲಿ ನಿಮ್ಮೆಲ್ಲರಿಗೂ ಸರ್ವ ಶುಭಗಳನ್ನು ಅನುಗ್ರಹಿಸುವಂತೆ ಗುರುಗಳ ಅಂತರ್ಯಾಮಿಯಾದ ಶ್ರೀಮದ್ವವರದ ಶ್ರೀ ಲಕ್ಷೀನಾರಾಯಣ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂಬ ಸಂದೇಶ ಹಾಕಿದ್ದಾರೆ.

# ಆರ್‌ವೈಎಂಇಸಿಯಲ್ಲಿ ಅದ್ದೂರಿಯಾಗಿ ನಡೆದ ಪದವಿ ದಿನಾಚರಣೆ



ಬಳ್ಳಾರಿ: ಬಳ್ಳಾರಿ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾವ್ ಬಹದ್ದೂರ್.ವೈ.ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದಿನಾಂಕ 20.05.2023 ಶನಿವಾರ ಬೆಳಿಗ್ಗೆ 11.00ಕ್ಕೆ ಜರುಗಿದ "ಪದವಿ ದಿನಾಚರಣೆ 2022–2023" ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ ರೀಜನಲ್ ಡೈರೆಕ್ಟರ್–ಕಲಬುರಗಿ ವಲಯದ ಡಾ॥ಬಸವರಾಜ್ ಗದಗೇ, ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರು ಹಾಗು ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಅಲ್ಲಂಚನ್ನಪ್ಪ, ಕಾರ್ಯದರ್ಶಿ ಗುರುಸಿದ್ದಸ್ವಾಮಿ, ಆರ್.ವೈ.ಎಮ್,ಇ,ಸಿ ಆಡಳಿತ ಮಂಡಳಿಯ ಸದಸ್ಯರಾದ ಜಿ.ಎಂ. ಮಲ್ಲಿಕಾರ್ಜುನರೆಡ್ಡಿ, ರೂಪನಗುಡಿ ಬಸವರಾಜ, ಜಾನೆಕುಂಟೆ ಪೋಂಪನ ಗೌಡ,ಕೊರ್ಲಗುಂದಿ ಬಸವನ ಗೌಡ, ಹಲಕುಂದಿ ಸತೀಶ್‌ಕುಮಾರ್, ವಿ.ವೀ.ಸಂಘದ ಕಾರ್ಯಕಾರಿಸಮಿತಿಯ ಸದಸ್ಯರು ಕೋರಿ ವಿರೂಪಾಕ್ಷಪ್ಪ, ಪ್ರಾಂಶುಪಾಲರಾದ ಡಾ॥ ಟಿ. ಹನುಮಂತರೆಡ್ಡಿ, ಉಪ ಪ್ರಾಂಶುಪಾಲರಾದ, ಡಾ॥ ಸವಿತ ಸೊನೊಳಿ, ಡೀನ್–ಪರೀಕ್ಷಾ ಡಾ॥ ಶ್ರೀಪತಿ.ಬಿ ಡೀನ್–ಅಕಾಡಮಿಕ್ ಡಾ॥ಗಿರೀಶ್.ಹೆಚ್, ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು ಪದವೀಧರರಾದ ಅಂತಿಮ ವರ್ಷದವಿದ್ಯಾರ್ಥಿಗಳು, ಅವರ ಪೋಷಕರುಗಳ ಘನಉಪಸ್ಥಿತಿಯಲ್ಲಿ ಸಮಾರಂಭವು ಜರುಗಿತು.

ಡಾ॥ಬಸವರಾಜ್ ಗದಗೇ, ವಿದ್ಯಾರ್ಥಿಗಳಿಗೆ ಅವರ ಮುಂದಿನ ಜೀವನದ ಭವಿಷ್ಯತ್ತಿಗಾಗಿ ಕೆಲವು ಸೂಕ್ತ ಸಲಹೆಗಳನ್ನು ನೀಡುತ್ತಾ " ಈ ದಿನ ನೀವು ನಿಮ್ಮ ಪದವಿಯನ್ನು ಪೂರ್ಣಘೊಳಿಸುವುದು ನಿಮ್ಮ ಅಧ್ಯಯನದ ಅಂತ್ಯವಲ್ಲ, ವಾಸ್ತಾವವಾಗಿ ಇದು ಪ್ರಗತಿಪರ ಜೀವನದ ಆರಂಭವಾಗಿದೆ, ಈ ಕಲ್ಯಾಣ ಕರ್ನಾಟಕ ಪ್ರದೇಶದ ನಿಮ್ಮ ಸಂಸ್ಥೆಯ ಬಗ್ಗೆ ನೀವು ಹೆಮ್ಮೆ ಪಡಬೇಕು, ಕೆಲವರು ನಿಮ್ಮ ಮೇಲೆ ಅಪಾರ ನಂಬಿಕೆ ಇಟ್ಟಿದ್ದಾರೆ, ಪೋಷಕರು, ಶಿಕ್ಷಕರು, ಸಮಾಜ ಕುಟುಂಬದ ಸದಸ್ಯರು,ಇತ್ಯಾದಿ. ಅವರ ನಬಿಕೆಯನ್ನು ಮುರಿಯಬೇಡಿ, ಎಂದು ನನ್ನ ವಿನಂತಿ, ನಿಮ್ಮ ಕನಸಿನಂತೆ ಉಜ್ವಲ ಭವಿಷ್ಯಯವನ್ನು ರಚಿಸಿ, ಉತ್ತಮ ಉದ್ಯಮಿಯಾಗಬೇಕೆಂಬ ಉತ್ಸಾಹವನ್ನು ಹೊಂದಿರಿ, ಅದಕ್ಕಾಗಿ ಶ್ರಮಿಸಿ.

ಈಗ ಭಾರತ ದೇಶವನ್ನು ವಿಶ್ವದ ಎರಡನೇ ಪ್ರಕಾಶಮಾನವಾದ, ನುರಿತ, ಪ್ರತಿಭಾವಂತ ಮಾನವ ಸಂಪನ್ಮೂಲ ದೇಶವೆಂದು ಕರೆಯಲಾಗುತ್ತಲಿದೆ. ನೀವು ಐ.ಐ.ಟೀಯನ್ನರಿಗಿಂತ, ವಿಶ್ವದ ಯಾವುದೇ ಪ್ರಮುಖ ವಿಶ್ವವಿದ್ಯಾಲಯಗಳ ಪಧವೀಧರರಿಗಿಂತ ಕಡಿಮೆಯಿಲ್ಲ, ಅಲ್ಲದೇ ಅಮೆರಿಕಾದೇಶದ ಅನೇಕ ವಿಶ್ವವಿದ್ಯಾಲಯಗಳು ತಮ್ಮ ಹಳೇಯ ವಿದ್ಯಾರ್ಥಿಗಳ ಕಾರಣದಿಂದಾಗಿ ಪ್ರಕಾಶಮಾನವಾಗಿ ಹೊಳೆಯುತ್ತಿರುವುದನ್ನು ನಾನು ನೋಡಿದ್ದೇನೇ, ನೀವು ಸಹ ನಿಮ್ಮ ಈ ಸಂಸ್ಥೆಯನ್ನು ಪ್ರಕಾಶಮಾನವಾಗಿ ಮಾಡುತ್ತೀರಿ ಎನ್ನುವ ನಂಬಿಕೆ ಇದೆ, ನಿಮಗೆ ಎಲ್ಲಾ ಶುಭಾಶಯಗಳು" ಎಂದು ನುಡಿದರು.

ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರು ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಅಲ್ಲಂಚನ್ನಪ್ಪ, ಕಾರ್ಯದರ್ಶಿ ಗುರುಸಿದ್ದಸ್ವಾಮಿ, ಹಾಗೂ " ನಿಮ್ಮ ಜೀವನದ ಇಂದಿನ ಈ ಸುದಿನ ದಂದು ಆ ಭಗವಂತನು ಉಜ್ವಲ ಭವಿಷಯವನ್ನು ನಿರ್ಮಿಸಲು ಶಕ್ತಿಯನ್ನು ಕೊಡಲಿ" ಎಂದು "ಪದವಿ ದಿನಾಚರಣೆ ಸಮಾರಂಭವನ್ನು" ಉದ್ಘಾಟಿಸಿದರು. ಉಪ ಪ್ರಾಂಶುಪಾಲರಾದ, ಡಾ॥ ಸವಿತ ಸೊನೊಳಿ, ಪದವೀಧರರಾಗುತ್ತಿರುವ ವಿದ್ಯಾರ್ಥಿವೃಂದದವರಿಂದ ಉತ್ತಮ ಪ್ರಜೆಯಾಗುವ ಪ್ರಮಾಣ ವಚನ ಸ್ವೀಕಾರವನ್ನು ಪೂರ್ಣಗೊಳಿಸಿದರು. ಮುಖ್ಯ ಸಂಯೋಜಕರಾದ ಡಾ॥ ಶ್ರೀಪತಿ.ಬಿ ಡೀನ್–ಪರೀಕ್ಷಾ ವಿಭಾಗ ಇವರು ಪತ್ರಿಕಾ ಪ್ರಕಟಣೆಗಾಗಿ ತಿಳಿಸಿರುತ್ತಾರೆ.

# ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿ ಮೇಲೇರಿದ ಡಿ.ಕೆ.ಶಿವಕುಮಾರ್



ಬೆಂಗಳೂರು: ರಾಜ್ಯದ ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್, ವಿಧಾನ ಸೌಧ ಮೆಟ್ಟಿಲುಗಳಿಗೆ ತಲೆಬಾಗಿ ನಮಸ್ಕರಿಸಿ ವಿಧಾನಸೌಧ ಪ್ರವೇಶಿಸಿದ್ದಾರೆ.

# ಕಾಂಗ್ರೆಸ್ ಮುಖಂಡ ಕೆ.ಸಿ.ಕೊಂಡಯ್ಯರ ಭೇಟಿ ಮಾಡಿ ಆಶೀರ್ವಾದ ಪಡೆದ ಶಾಸಕ ನಾರಾ ಭರತ್‌ರೆಡ್ಡಿ

ಬಳ್ಳಾರಿ: ಕಾಂಗ್ರೆಸ್ಸಿನ ಹಿರಿಯ ಮುಖಂಡ, ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಸಿ.ಕೊಂಡಯ್ಯ ಅವರನ್ನು ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ನಾರಾ ಭರತ್ ರೆಡ್ಡಿ ಅವರು ಭೇಟಿಯಾಗಿ ಆಶೀರ್ವಾದ ಪಡೆದರು. ಬೆಂಗಳೂರಿನಲ್ಲಿರುವ ಕೆ.ಸಿ.ಕೊಂಡಯ್ಯ ಅವರ ನಿವಾಸದಲ್ಲಿ ಅವರನ್ನು ಭೇಟಿ ಮಾಡಿದ ಶಾಸಕ ನಾರಾ ಭರತ್ ರೆಡ್ಡಿ ಅವರು ಚುನಾವಣೆಯಲ್ಲಿ ಸೂಕ್ತ ಮಾರ್ಗದರ್ಶನ, ಸಲಹೆಯೊಂದಿಗೆ ಬೆಂಬಲ ನೀಡಿದ್ದಕ್ಕಾಗಿ ಧನ್ಯವಾದ ಅರ್ಪಿಸಿದರು. ಮುಂಬರುವ ದಿನಗಳಲ್ಲಿ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯ ಸುಸೂತ್ರವಾಗಿ ನಡೆಸಲು ಸಹಕಾರ ಹಾಗೂ ಮಾರ್ಗದರ್ಶನ ನೀಡುವಂತೆ ನಾರಾ ಭರತ್‌ರೆಡ್ಡಿ ಅವರು ಮನವಿ ಮಾಡಿದರು. ಭರತ್ ರೆಡ್ಡಿ



ಅವರು ಈ ವೇಳೆ ಶಾಲು ಹೊದಿಸಿ, ಹಾರ ಹಾಕಿ ಸನ್ಮಾನಿದರು.

ಈ ಸಂದರ್ಭದಲ್ಲಿ ನಾರಾ ಭರತ್ ರೆಡ್ಡಿ ಅವರ ಗೆಲುವಿನ ಕುರಿತು ಹರ್ಷ ವ್ಯಕ್ತಪಡಿಸಿದ ಕೆ.ಸಿ.ಕೊಂಡಯ್ಯ ಅವರ ಭರತ್ ರೆಡ್ಡಿ ಅವರ ಗೆಲುವನ್ನು ಕೊಂಡಾಡಿದರು. ಇಡೀ ರಾಜ್ಯದಾದ್ಯಂತ ಜನರು ಕಾಂಗ್ರೆಸ್ಸಿನ ಪರ ಒಲವು ತೋರಿದ್ದಾರೆ. ಅದರಲ್ಲೂ ಬಳ್ಳಾರಿ ನಗರದ ಮತದಾರರು ಕಾಂಗ್ರೆಸ್ಸಿಗೆ ಸಂಪೂರ್ಣ ಬೆಂಬಲ ನೀಡಿದ್ದು, ಜನರ ಆಶೋತ್ತರ ಈಡೇರಿಸುವಂತೆ ಸಲಹೆ ನೀಡಿದರು. ಮುಂಬರುವ ದಿನಗಳಲ್ಲಿ ಅಭಿವೃದ್ಧಿಯ ವಿಷಯದಲ್ಲಿ ಸದಾ ಬೆನ್ನಿಗೆ ನಿಂತು ಮಾರ್ಗದರ್ಶನ ಮಾಡುವುದಾಗಿ ತಿಳಿಸಿದರು. ಇದೇ ವೇಳೆ ನೂತನ ಶಾಸಕ ನಾರಾ ಭರತ್ ರೆಡ್ಡಿ ಅವರನ್ನು ಕೆ.ಸಿ.ಕೊಂಡಯ್ಯ ಅವರು ಸನ್ಮಾನಿಸಿದರು.

# ಏರಿಗೆ ನೀರಿಗೆ ಎಳೆಯದೆ ಸರಿದಾರಿಯಲ್ಲಿ ಸಾಗಲಿ ಸರಕಾರ

**ಎಚ್. ಮಾರುತಿ**

ಕೊನೆಗೂ ಹೈ ಕಮಾಂಡ್ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಹಂಚುವಲ್ಲಿ ಯಶಸ್ಸು ಕಂಡರೂ, ರಾಜ್ಯ ಸರ್ಕಾರದಲ್ಲಿ ಎರಡು ಪ್ರಬಲ 'ಶಕ್ತಿ ಕೇಂದ್ರಗಳು' ಸೃಷ್ಟಿಯಾಗುವುದು ಸುಳ್ಳಲ್ಲ. ಈ ಎರಡೂ ಶಕ್ತಿ ಕೇಂದ್ರಗಳು ಪರಸ್ಪರ ಸಂಘರ್ಷಕ್ಕೆ ಇಳಿಯದಂತೆ ಆಡಳಿತದ ರಥವನ್ನು ಸರಾಗವಾಗಿ ನಡೆಸಿಕೊಂಡು ಹೋಗುವಂತೆ ನೋಡಿಕೊಳ್ಳುವ ಮತ್ತು ಎಚ್ಚರಿಕೆ ವಹಿಸುವ ಹೊಣೆಗಾರಿಕೆ ಹೈಕಮಾಂಡ್ ಹೆಗಲ ಮೇಲಿದೆ. ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಇಬ್ಬರ ಪಾತ್ರವೂ ಮಹತ್ವಪೂರ್ಣವಾದದ್ದು ಎನ್ನುವುದರಲ್ಲಿ ಸಂಶಯಗಳಿಲ್ಲ. ಇಬ್ಬರಲ್ಲಿ ಒಬ್ಬರು ಒಂದು ಹೆಜ್ಜೆ ಹಿಂದಿಟ್ಟಿದ್ದರೂ ಗೆಲುವು ಗಗನ ಕುಸುಮವಾಗುತ್ತಿತ್ತು.

ಅಷ್ಟರ ಮಟ್ಟಿಗೆ ಇಬ್ಬರೂ ನಾಯಕರು ಯಾವುದೇ ಕಾರಣ ಮತ್ತು ಹಂತದಲ್ಲಿ ಹಿಂದೆ ಸರಿಯುವ ಸ್ವಭಾವ ಹೊಂದಿದವರಲ್ಲ.

ಮುಖ್ಯಮಂತ್ರಿ ಹುದ್ದೆಗಾಗಿ ನಾಲ್ಕೈದು ದಿನ ನಡೆದ ಹಗ್ಗಜಗ್ಗಾಟ ಈ ಇಬ್ಬರ ಸಾಮರ್ಥ್ಯ ಏನು ಎನ್ನುವುದನ್ನು ಬಹಿರಂಗಪಡಿಸಿದೆ. ಈ ಇಬ್ಬರ ಕೈ ಕುಲುಕಿಸಲು ಹೈಕಮಾಂಡ್ ಬೆವರು ಹರಿಸಿದ್ದು ಸುಳ್ಳಲ್ಲ. ಸೋನಿಯಾ, ರಾಹುಲ್, ಖರ್ಗೆ, ಸುರ್ಜೇವಾಲ, ವೇನು ಗೋಪಾಲ್ ಹೀಗೆ ಹಲವು ಘಟಾನುಘಟಿಗಳು ಹರ



ಸಾಹಸಪಟ್ಟಿದ್ದಾರೆ.

ಬಿಜೆಪಿ ಸರಕಾರದ ಆಡಳಿತ ವಿರೋಧಿ ಅಲೆ ಕಾರಣಕ್ಕೆ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎನ್ನುವುದು ಎಂದೋ ಬಹಿರಂಗಗೊಂಡ ಸತ್ಯವಾಗಿತ್ತು. ಈ ಶತಾಯಗತಾಯ ಅಧಿಕಾರ ಹಿಡಿಯುವುದು ಶತಸಿದ್ಧ ಎನ್ನುವುದನ್ನು ಊಹಿಸಿದ್ದ ಇಬ್ಬರೂ ಮುಖಂಡರು ತಮ್ಮ ತಮ್ಮ ಪಟ್ಟುಗಳನ್ನು ಸಡಿಲಿಸಿರಲಿಲ್ಲ. ಚುನಾವಣೆ ಆರಂಭದಿಂದಲೂ ಈ ಇಬ್ಬರ ಮಧ್ಯೆ ಬಣ ಸಂಘರ್ಷ, ಪ್ರತಿಷ್ಠೆಯ ಸಮರ ನಡೆಯುತ್ತಲೇ ಬಂದಿತ್ತು. ಸಾರ್ವಜನಿಕವಾಗಿ ಇಬ್ಬರೂ ಕಿತ್ತಾಡಿಕೊಂಡ ಅಥವಾ ಮುನಿಸಿಕೊಂಡದ್ದು ಕಂಡು ಬರಲಿಲ್ಲ. ಅಷ್ಟರ ಮಟ್ಟಿಗೆ ಗೋಪ್ಯತೆಯನ್ನು ಕಾಪಾಡಿಕೊಂಡು ಬಂದ ಇವರಿಗೆ ಹೈ ಕಮಾಂಡ್ ಆಭಾರಿಯಾಗಿರಬೇಕು.

ಒಗ್ಗಟ್ಟಿನಿಂದ ಜನಸೇವೆಗೆ ತೊಡಗುವುದಾಗಿ ಒಟ್ಟಾಗಿ ಸಾರಿದ್ದಾರೆ. ಡಿಕೆಶಿ ಬಂಡಾಯ ಏಳುತ್ತಾರೆ. ಕಾಂಗ್ರೆಸ್ ಒಡೆದ ಮನೆಯಾಗುತ್ತದೆ. ಪಕ್ಷಕ್ಕೆ ದೊರೆತ ಬಹುಮತ ಛಿದ್ರವಾಗಿ ಹೋಳಾಗುತ್ತದೆ ಎಂದೆಲ್ಲ ನಿರೀಕ್ಷೆ ಮಾಡುವವರು ಇದ್ದರು. ಅವರ ಆಸೆ ನಿರಾಸೆಯಾಗಿದೆ. ಲೋಕಸಭಾ ಚುನಾವಣೆ ನಡೆಯುವವರೆಗೆ ಸರಕಾರ ಸುಭದ್ರವಾಗಿರುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ.

ಯಾವುದೇ ರಾಜಕೀಯ ಪಕ್ಷದಲ್ಲಿ ಅಧಿಕಾರಕ್ಕಾಗಿ ಆಂತರಿಕ ಪೈಪೋಟಿ ಸ್ವಾಭಾವಿಕ. ಆದರೆ ಅದು ಪಕ್ಷವನ್ನು ಒಡೆಯುವ ಹಂತ ತಲುಪಿದರೆ ಮಾತ್ರ ಹಾನಿಕಾರಕ. ಹೀಗಾಗಿ ಮುಖ್ಯಮಂತ್ರಿ ತಾನೇ ಆಗಬೇಕು ಎಂದು ಬಯಸುವುದು ಇಬ್ಬರ ತಪ್ಪಲ್ಲ.

ಐದು ವರ್ಷಗಳ ಅವಧಿಯನ್ನು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರಿಗೂ ಹಂಚಲಾಗಿದೆ. ಯಾವ ರೀತಿ ಎನ್ನುವುದು ರಹಸ್ಯವಾಗಿದೆ. ಅಧಿಕಾರ ಹಂಚಿಕೆಗೆ ಯಾವುದೇ ಬಣ ವಿರೋಧ ವ್ಯಕ್ತಪಡಿಸಿಲ್ಲ. ಮೊದಲು ತಾನೇ ಸಿಎಂ ಆಗಬೇಕು ಎನ್ನುವುದಷ್ಟೇ ಹಗ್ಗ ಜಗ್ಗಾಟಕ್ಕೆ ಕಾರಣವಾಗಿತ್ತು. ಹೈ ಕಮಾಂಡ್ ಕೂಡಾ ಆತುರ ಪಡದೆ ಸರಾಗವಾಗಿ ಬಗೆಹರಿಸಿದೆ. ಬೆಟ್ಟದಂತೆ ಎರಗಿದ ಸಮಸ್ಯೆ ಮಂಜಿನಂತೆ ಕರಗಿದೆ.

ಮೊದಲ ಹಂತದಲ್ಲಿ ತಮಗೆ ಅಧಿಕಾರ ಸಿಗದು ಎನ್ನುವುದು ಶಿವಕುಮಾರ್ ಅವರಿಗೆ ಗೊತ್ತಿತ್ತು. ಆದರೂ ಅವರು ಸುಲಭವಾಗಿ ಮಣಿಯಲಿಲ್ಲ. ಎರಡನೆಯ ಅವಧಿಗೆ ತಮ್ಮನ್ನು ಮುಖ್ಯಮಂತ್ರಿ ಮಾಡುತ್ತಾರೆಂಬುದನ್ನು ಖಚಿತ ಪಡಿಸಿಕೊಳ್ಳಲು ಈ ಚೌಕಾಸಿ ನಡೆಸಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿ ಐದು ಗ್ಯಾರಂಟಿಗಳನ್ನು ಮತದಾರರಿಗೆ ನೀಡಿದ್ದ ಶಿವಕುಮಾರ್, ವರಿಷ್ಠರಿಂ ಒಂದು 'ಗ್ಯಾರಂಟಿ'ಯನ್ನು ಪಡೆದುಕೊಂಡಿದ್ದಾರೆ ಎಂದು ಅವರ ಆಪ್ತ ವಲಯ ಹೇಳುತ್ತದೆ.

ಸಿದ್ದರಾಮಯ್ಯ ಮಾಸ್ ಲೀಡರ್ ಎನ್ನುವುದು ನಿಸ್ಸಂಶಯ. ಹಾಗೆಯೇ ಡಿ.ಕೆ.ಶಿವಕುಮಾರ್ ಅವರ ಸಂಪನ್ಮೂಲ ಮತ್ತು ಸಂಘಟನಾ ಚತುರ ಎನ್ನುವುದೂ ನಿಸ್ಸಂಶಯ. ಒಂದು ಪಕ್ಷದ ಗೆಲುವಿಗೆ ಹತ್ತಾರು ಕಾರಣಗಳು ಇರುತ್ತವೆ. ಆಡಳಿತ ವಿರೋಧಿ ಅಲೆ, ನಿಷ್ಕ್ರಿಯ ಸರಕಾರ, ಹಲವು ಸಮುದಾಯಗಳ ವಿರೋಧ, ಶೇಕಡಾ ನಲವತ್ತು ಕಮಿಷನ್ ಆರೋಪ ಹೀಗೆ ಪಟ್ಟಿ ಬೆಳೆಯುತ್ತದೆ.

ಅಧಿಕಾರದ ಹಂಚಿಕೆ ಮುಗಿದಿದೆ. ಖಾತೆಗಳ ಹಂಚಿಕೆ ಮತ್ತೊಂದು ಪ್ರಮುಖ ಅಧ್ಯಾಯ. ಇಲ್ಲಿಂದಲೇ ಸರಕಾರಕ್ಕೆ ಸವಾಲು ಆರಂಭವಾಗುತ್ತದೆ. ಪ್ರದೇಶವಾರು ಮತ್ತು ಜಾತಿವಾರು ಹಂಚಿಕೆಯ ಕೆಲಸ ಹಗ್ಗದ ಮೇಲಿನ ನಡಿಗೆ ಇದ್ದಂತೆ. ಆಗ ಅಸಮಾಧಾನ, ಆಕ್ರೋಶ ಉಂಟಾಗದಂತೆ ತಡೆಯುವ ಜವಾಬ್ದಾರಿ ಇಬ್ಬರ ಮೇಲಿದೆ.

ಕಾಂಗ್ರೆಸ್ ಸರಕಾರ ಅಧಿಕಾರದ ಅಮಲಿನಲ್ಲಿ ತೇಲಬಾರದು. ವರ್ಷ ಕಳೆಯುವ ಮೊದಲೇ ಲೋಕಸಭಾ ಚುನಾವಣೆ ನಡೆಯಲಿದೆ. ಭಾರೀ ಬಹುಮತದ ಉಡುಗೊರೆ ನೀಡಿರುವ ಮತದಾರರು ಹಾದಿ ತಪ್ಪಿದರೆ ಶಿಕ್ಷಿಸಲೂ ಬಲ್ಲರು ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು.

ಈ ಬಾರಿ ಘಟಾನುಘಟಿ ನಾಯಕರೆಲ್ಲ ಶಾಸನ ಸಭೆಗೆ ಆಯ್ಕೆಯಾಗಿದ್ದಾರೆ. ಇವರೆಲ್ಲರೂ ಹದ್ದಿನ ಕಣ್ಣು ಇಟ್ಟಿರುತ್ತಾರೆ. ಸಚಿವ ಸ್ಥಾನಕ್ಕೆ ಪೈಪೋಟಿ ನಡೆಸುತ್ತಾರೆ. ಸಂಪುಟದಲ್ಲಿ ಸ್ಥಾನ ಸಿಗದ ಅಸಮಾಧಾನಿತ ಮತ್ತು ಅತೃಪ್ತರ ಮನವೊಲಿಸುವುದು ಸುಲಭದ ಕೆಲಸವಲ್ಲ. ಸರಕಾರಕ್ಕೆ 135 ಶಾಸಕರ ಜೊತೆ, ಮೂವರು ಪಕ್ಷೇತರ ಶಾಸಕರೂ 'ಕೈ' ಜೋಡಿಸಿದ್ದಾರೆ. ಹೀಗಾಗಿ, ಆಡಳಿತ ಪಕ್ಷದ ಬಲ 138ಕ್ಕೆ ಏರಿಕೆಯಾಗಿದೆ. ಈ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಭಾಳಿಸಿಕೊಂಡು ಹೋಗುವುದು ಸರ್ಕಾರದ ಇಬ್ಬರೂ ಮುಖ್ಯಸ್ಥರಿಗೆ ಸವಾಲಿನ ಕೆಲಸವೇ ಸರಿ.

## ಸರಾಯಿ ತೆಗೆದುಕೊಂಡು ಬಿಲ್ ರಸೀದಿ ಕೇಳಿದರೆ ಸಾಹುಕಾರ್ ಬಂದ ಕೊಡ್ತಾರೆ..!

# ಸರಾಯಿ ಪ್ರಿಯರ ಗೋಳು ಕೇಳವರು ಯಾರು?

ನಿಡಸೋಶಿ ಗೇಟ್: ಲಿಕ್ಕರ್ ಬಿಲ್ ಕೇಳಿದರೆ ಸಾಹುಕಾರ್ ಬಂದ ಕೊಡ್ತಾರೆ, ಗ್ರಾಹಕರ ಗೋಳು ಕೇಳುವವರ್ಯಾರು, ಕಣ್ಣು ಮುಚ್ಚಿ ಕುಳಿತ ಅಬಕಾರಿ ಇಲಾಖೆ ಪೊಲಿಸ್ ಇಲಾಖೆ.ಅಯ್ಯೊ ದೇವರೆ ಬಿಲ್ ಕೇಳಬಾರ್ದಾ?ಬಿಲ್ ಕೊಡಲ್ವಾ!!! ಏಕೆ

ಹೌದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ನಿಡಸೋಸಿ ಗೇಟ ಸಮೀಪವಿರುವ ವಿಜಯಲಕ್ಷ್ಮಿ ಬಾರ್ ಒಂದರಲ್ಲಿ ಬಿಲ್ಲೆ ಕೊಡಲ್ಲ ಬಿಲ್ ಕೇಳಿದ್ರೆ ಗ್ರಾಹಕರಿಗೆ ಗೂಸಾ ಪೆಟ್ಟು ಬಿಳುವದು ಗ್ಯಾರಂಟಿ,ಅಯ್ಯೋ ಪಾಪ ಗ್ರಾಹಕರೇ ದೇವರು ಎಂದು ಒಂದು ಕಡೆ ಬೊರ್ಡ ಇದ್ರೆ ಮತ್ತೊಂದು ಕಡೆ ಸರ್ವಾಧಿಕಾರ.ಸರ್ಕಾರ ನಡೆಯುತ್ತಿರುವದೇ ಸರಾಯಿ ಮೇಲೆ ಎಂದು ಮರೆತ ಸರ್ಕಾರಕ್ಕೆ ಛಿಮಾರಿ ಹಾಕಬೇಕಿದೆ ಹೌದು ಬಿಲ್ ಬೇಕು ಬಿಲ್ ಕೊಡಲ್ಲಾ ಕೊಡಲ್ಲ ಎಂದ ಬಾರ್ ಮಾಲೀಕ ವೆಲ್ ಎಜ್ಯುಕೆಟೆಡ್ ವ್ಯಕ್ತಿಯೊರ್ವ ಬಾರ್ ಗೆ ಹೋಗಿ ಸರಾಯಿ ಮಾರಾಟ ಮಾಡುತ್ತಿರುವ ರ ಹತ್ತಿರ ಸಾರಾಯಿ ತೆಗೆದುಕೊಂಡು ನಂತರ ಬಿಲ್ ಕೇಳಿದ್ದಕ್ಕೆ



ಬಿಲ್ ಕೊಡದೆ ಕಾನೂನಿನ ನಿಯಮ ಉಲ್ಲಂಘನೆ ಮಾಡಿರುವ ಘಟನೆ ಇದೀಗ ಬೆಳಕಿಗೆ ಬಂದಿದೆ..

ಇನ್ನೂ ಆಡಿಟ್ ರಿಪೊರ್ಟ ಮಾಡುವವ–ರಿಗೆ ಪಂಗನಾಮ ಹಾಕುವದು ಇದರಲ್ಲಿ ಸಂಶಯವಿಲ್ಲ ಎಂದು ಕಾಣ ಬರುತ್ತಿದೆ. ತಮ್ಮ ಖಜಾನೆ ತುಂಬಿಸಿಕೊಳ್ಳಲು ದುಭಾರಿ ಬೆಲೆಗೆ ಸರಾಯಿ ಮಾರಾಟ ಮಾಡಿಕೊಂಡು ಬಿಲ್ ಕೊಡದೆ ವ್ಯಕ್ತಿಯೊರ್ವನಿಗೆ ಧಮ್ಕಿ ಹಾಕಿದ ಘಟನೆ ನಿಡಸೋಶಿ ಗೇಟನ ವಿಜಯಲಕ್ಷ್ಮಿ ಬಾರನಲ್ಲಿ ನಡೆದಿದೆ ಆದ–'ರೆ ಈ ಬಗ್ಗೆ ಕೆಳುವವರು ಯಾರು ಇಲ್ಲವೆ ಅಧಿಕಾರಿಗಳಂತೂ ಹಪ್ತಾಗೆ ಬೆನ್ನು ಹತ್ತಿ ಗ್ರಾಹಕರ ಹಣ ಪೀಕುವಲ್ಲಿ ಮುಂದಾಗಿದ್ದಾರೆ,ಎಂದು ಸರಾಯಿ ಪ್ರಿಯರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.




ಇನ್ನೂ ಬಿಲ್ ಕೊಡದೆ ಇಷ್ಟು ವರ್ಷಗಳಲ್ಲಿ ಎಷ್ಟು ಹಣ ಮಾಡಿರಬಹುದು ಎಂದು ಪ್ರಶ್ನೆ ಎಲ್ಲರಲ್ಲಿಯೂ ಕಾಡುತ್ತಿದೆ.ಯಾವ ಇಲಾಖೆಗೆ ಹೋಗಲಿ ಎಲ್ಲರಿಗೂ ಒಂದು ಸರ್ಕಾರ ಮಿತಿ ಇಟ್ಟಿದೆ.

ಆದರೆ ಈ ಬಾರನವರು ಮಾಡಿದ್ದೆ ಆಟ ಒಡಿದ್ದೆ ಕುದುರೆ ಎಂಬಂತೆ ಗ್ರಾಹಕರಿಗೆ ಮಕ್ಮಲ್ ಟೋಪಿ ಹಾಕುತ್ತಿದ್ದಾರೆ.

ಹೀಗಾದರೆ ಬಾರ್ ಲೈಸನ್ಸ್ ರದ್ದು ಮಾಡಬಹುದು ಹಾಗೇಯೆ ಸ್ವಲ್ಪ ಶೌಚಾಲಯ ಕುಡಿಯುವ ನೀರಿನ ಬಗ್ಗೆ ಮಾಹಿತಿ ಹೇಳಬೇಕಾದರೆ ಅಯ್ಯೋ ನೀರಾ ಇವು, ಹೇಗೆ ಕುಡಿತಿರಪ್ಪಾ . ಹೇಗಾದ್ರೂ ಇಂತವರಿಗೆ ಪರ್ಮಿಶನ್ ಕೊಟ್ರು ಅನ್ಯಾಯ ಅನ್ಯಾಯ ಅನ್ಯಾಯ ಕುಡುಕರಿಗೆ ಅನ್ಯಾಯ ಮನೇಲಿ ನೀರಿನಲ್ಲಿ ಒಂದು ಕೂದಲು ಬಿದ್ರೆ ಜಗಳವಾಡ್ತಿರಿ ಇಲ್ಲಿ ನೀರಿನ ಟ್ಯಾಂಕ್ ಒಮ್ಮೆ ಇಣುಕಿ ನೋಡಿ ನಿವೆಂದು ಈ ಬಾರಗೆ ಹೋಗಲೇಬಾರದು ಹಾಗೇ ಅವ್ಯವಸ್ಥೆ ನಿಮ್ಮ ಮುಂದೆ ಇದೆ.ಎಚ್ಚರ ಗ್ರಾಹಕರೆ ನೀವು ಜಾಣರಾಗಿ ದುಡ್ಡು ಕೊಟ್ಟು ರೋಗ ಹಚ್ಚಿಕೊಂಡು ಬರುವದಾರೆ ಹಾಗೆ ಬಿಲ್ ಕೆಳೊದಿಲ್ಲ, ಹಾಗಿದ್ದರೆ ಧಾರಾಳವಾಗಿ ಸರಾಯಿ ಕುಡಿರಿ.ಯಾರ್ದೊ ದುಡ್ಡು ಯಲ್ಲಮ್ಮನ ಜಾತ್ರೆ ವಿಜಯಲಕ್ಷ್ಮಿ ಬಾರ ಮೇಲೆ ಅಧಿಕಾರಿಗಳು ಯಾವರೀತಿ ಕ್ರಮ ಕೈಗೊಂಡು ಅನ್ಯಾಯವಾಗುತ್ತಿರುವ..

ಗ್ರಾಹಕರಿಗೆ ನ್ಯಾಯ ಒದಗಿಸುವಲ್ಲಿ ಮುಂದಾಗ್ತಾರಾ ಕಾದು ನೊಡಬೇಕಿದೆ. ಇನ್ನೂ ಪೊನ ಇನ್ ಕಾರ್ಯಕ್ರಮ ಕ್ಕೂ ದೂರು ನೀಡಲು ಮುಂದಾಗಿದ್ದಾರೆ. ದೂರು ನೀಡಿದವರ ವಿರುದ್ದ ಜಗಳ ಆಗುವದು ಗ್ಯಾರಂಟಿ ಆದರೆ ಇದನ್ನೆಲ್ಲ ಪೊಲಿಸರು ಹೇಗೆ ಹ್ಯಾಂಡಲ್ ಮಾಡಿ ಸರ್ವಾಧಿಕಾರ ತೊರುವ ಬಾರ್ ಮಾಲಿಕನಿಗೆ ಪೋಲಿಸರು ಯಾವ ರೀತಿ ಶಾಕ್ ಕೊಡುತ್ತಾರೆಂದು ಕಾದು ನೊಡಬೇಕಿದೆ.

## ವಿಧಾನಸೌಧದ 3ನೇ ಮಹಡಿಯಲ್ಲಿ ನೂತನ ಸಿಎಂ ನಾಮಫಲಕ ಅಳವಡಿಕೆ

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಕಂಠೀರವ ಕ್ರೀಡಾಂಗಣದಲ್ಲಿ ಸಿದ್ದರಾಮಯ್ಯನವರು ಪ್ರತಿಜ್ಞಾವಿಧಿ ಓದುತ್ತಿದ್ದಂತೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ನೂತನ ಸಿಎಂ ನಾಮಫಲಕ ಅಳವಡಿಸಲಾಗಿದೆ.

ವಿಧಾನಸೌಧದ ಮೂರನೇ ಮಹಡಿಯ ಸಿಎಂ ಕೊಠಡಿಯಲ್ಲಿ ಇಷ್ಟು ದಿನ ಬಸವರಾಜ ಬೊಮ್ಮಾಯಿ ಅವರ ನಾಮಫಲಕ ಹಾಕಲಾಗಿತ್ತು. ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ಬೊಮ್ಮಾಯಿ ಅವರ ಹೆಸರು ತೆಗೆದು ಸಿಎಂ ಸಿದ್ದರಾಮಯ್ಯನವರ ನಾಮಫಲಕ ಅಳವಡಿಸಲಾಗಿದೆ.

ಸಿಎಂ ಸಿದ್ದರಾಮಯ್ಯನವರು ಪ್ರಮಾಣ ವಚನ




ಸ್ವೀಕರಿಸಿದ ಬಳಿಕ ವಿಧಾನಸೌಧಕ್ಕೆ ಭೇಟಿ ನೀಡಲಿದ್ದಾರೆ. ಮುಖ್ಯಮಂತ್ರಿ ಕಚೇರಿಯಲ್ಲಿ ಸಿದ್ದರಾಮಯ್ಯನವರ ಸ್ವಾಗತಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಿಎಂ ಕೊಠಡಿಯ ಸಿಬ್ಬಂದಿ ಸಿದ್ದರಾಮಯ್ಯನವರು ಬಂದ ಕೂಡಲೇ ಗಣಪತಿ, ಸರಸ್ವತಿ, ಲಕ್ಷ್ಮೀ ಪೂಜೆ ನೆರವೇ–ರಿಸಲು ರೆಡಿಯಾಗಿದ್ದಾರೆ.



ಸಿರುಗುಪ್ಪ: ನೂತನ ಸರ್ಕಾರದರಚನೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಮಂತ್ರಿಗಳ ಅಧಿಕಾರ ಪದಗ್ರಹಣದ ಪ್ರಮಾಣ ವಚನ ಕಾರ್ಯಕ್ರಮ ಹಿನ್ನಲೆ ನಗರದ ಮಹಾತ್ಮಗಾಂಧೀಜಿ ವೃತ್ತದಲ್ಲಿ ಕಾಂಗ್ರೇಸ್ ಕಾರ್ಯಕರ್ತರು ಮಹಾತ್ಮಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

## ಭೀಕರ ಅಪಘಾತ: ಮಗನ ಮಡಿಲಲ್ಲೇ ಪ್ರಾಣ ಬಿಟ್ಟ ತಂದೆ

ಬಾಗಲಕೋಟೆ : ಬಾಗಲಕೋಟೆ ಜಿಲ್ಲೆಯ ಅಮೀನಗಡದಲ್ಲಿ ತಂದೆ– ಮಗ ಬೈಕ್‌ನಲ್ಲಿ ಹೋಗುವಾಗ ಅಪರಿಚಿತ ವಾಹನ ಬಂದು ಡಿಕ್ಕಿ ಹೊಡೆದ ಪರಿಣಾಮ ತಂದೆ ಸಾವಿಗೀಡಾದ ಘಟನೆ ನಡೆದಿದೆ.

ಬಾಗಲಕೋಟೆಯ ನವನಗರದ ವಾಜಪೇಯಿ ಕಾಲೋನಿ ನಿವಾಸಿಯಾಗಿದ್ದ ರೆಹಮಾನಸಾಬ್ ಮುದಗಲ್ (50) ಮೃತ ವ್ಯಕ್ತಿ ಎಂದು ತಿಳಿದುಬಂದಿದೆ.

ರೆಹಮಾನ್ ಸಾಬ್ ಮಗ ಕಲಂದರ ಬಾಬಾನೊಂದಿಗೆ ಅಮೀನಗಡದಲ್ಲಿ ಟೈಲ್ಸ್ ಕೆಲಸಕ್ಕೆ



ಬೈಕ್‌ನಲ್ಲಿ ತೆರಳುತ್ತಿದ್ದರು.

ಆದರೆ, ಹಿಂದಿನಿಂದ ವೇಗವಾಗಿ ಬಂದ ಅಪ–ರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಬೈಕ್‌ನಿಂದ ಕೆಳಗೆ ಬಿದ್ದ ರೆಹಮಾನ್ ಸಾಬ್ ಮೇಲೆ ವಾಹನ ಹರಿದಿದ್ದು, ತೀವ್ರ ರಕ್ತಸ್ರಾವವಾಗಿದೆ. ಕೆಳಗೆ ಬಿದ್ದು ಗಾಯಗೊಂಡ ಮಗ ತಂದೆಯನ್ನು ಆಸ್ಪತ್ರೆಗೆ ಸೇ–ರಿಸಬೇಕು ಅನ್ನುವಷ್ಟರಲ್ಲೇ ಮಗನ ಮಡಿಲಲ್ಲೇ ತಂದೆ ಸಾವನ್ನಪ್ಪಿದ್ದಾರೆ.

ಸ್ಥಳಕ್ಕೆ ಬಂದ ಕುಟುಂಬಸ್ಥರು ಸ್ಥಳೀಯರ ಸಹಾಯದಿಂದ ಆ್ಯಂಬುಲೆನ್ಸ್‌ಗೆ ಕರೆ ಮಾಡಿ ಗಾಯಾಳು ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲು ಮುಂದಾಗಿದ್ದಾರೆ.

ಆದರೆ, ಆಸ್ಪತ್ರೆಗೆ ಹೋಗದೇ ಅಮೀನಗಡ ಪೊಲೀಸರು ಬಂದು ಸ್ಥಳ ಪರಿಶೀಲನೆ ಮಾಡಿ ತಂದೆಯ ಮೃತದೇಹವನ್ನು ತೆಗೆದುಕೊಂಡು ಆಸ್ಪತ್ರೆಗೆ ಹೋಗಿದ್ದಾರೆ ಎಂದು ತಿಳಿದುಬಂದಿದೆ.

## ಕುಡಿಯುವ ನೀರಿಗಾಗಿ ಬೈರಗಾಮದಿನ್ನಿ ಗ್ರಾಮಸ್ಥರ ಪರದಾಟ

ಸಿರುಗುಪ್ಪ : ತಾಲೂಕಿನ ಬೈರಗಾಮದಿನ್ನಿ ಗ್ರಾಮದಲ್ಲಿ ಶುದ್ದಕುಡಿಯುವ ನೀರಿನಘಟಕ ನಿರ್ಮಾಣವಾಗಿ ಎರಡು ವರ್ಷಗಳೇ ಕಳೆದರೂ ನೀರಿಲ್ಲದೇ ಘಟಕವು ದುರಸ್ತಿಯಲ್ಲಿದ್ದು ಪ್ರತಿನಿತ್ಯವುಕುಡಿಯುವ ನೀರಿಗಾಗಿ ಮಹಿಳೆಯರು, ಮಕ್ಕಳು, ಪರದಾಡುವಂತಾಗಿದೆ.

ಜಲೋತ್ಸವಯೋಜನೆಯಡಿಗ್ರಾಮದಲ್ಲಿ ಕೆಲವು ಕಡೆ ಪೈಪ್‌ಲೈನ್ ಸಂಪರ್ಕ ನೀಡಿದರೆಇನ್ನೂ ಕೆಲವಡೆ ಪೈಪ್ ಸಂಪರ್ಕವಿಲ್ಲದೇ ಕೇವಲ ನಳವನ್ನು ಮಾತ್ರ ನಿರ್ಮಿಸಿ ಪೋಟೋತೆಗೆದು ಕೊಂಡು ಬಿಲ್ ಪಾವತಿ ಮಾಡಿಕೊಂಡಿದ್ದಾರೆ.



ಯೋಜನೆಯಡಿ ಒಂದು ಹನಿಯೂ ನೀರುಬಂದಿಲ್ಲವೆಂದು ಗ್ರಾಮಸ್ಥರು ಆರೋಪಿಸಿದರು.

ಪಕ್ಕದಕೊತ್ತಲ ಚಿಂತ ಗ್ರಾಮದಲ್ಲಿರುವ ಕೆರೆಯಿಂದ ಕಳಪೆ ಗುಣಮಟ್ಟದ ಪೈಪ್‌ಗಳಿಂದ ನೀರು ಸಂಪರ್ಕಕಲ್ಪಿಸಲಾಗಿದೆ ಯಾದರೂ ಮಾರ್ಗ ಮದ್ಯದಲ್ಲೇ ಪದೇ ಪದೇ ಪೈಪ್‌ಒಡೆದಾಗ ಪಂಚಾಯಿತಿಯಿಂದ ದುರಸ್ತಿ ಮಾಡುವುದಿಲ್ಲ ನೀರು ಸರಿಯಾಗಿ ಸರಬರಾಜು ಆಗದಿದ್ದಾಗ ಗ್ರಾಮಸ್ಥರೇ ಪೈಪ್ ದುರಸ್ತಿ ಮಾಡಬೇಕಾದ ಅನಿವಾರ್ಯತೆ–ಎದುರಾಗಿದೆ.

ಗ್ರಾಮದಲ್ಲಿ ನೀರಿಗಾಗಿ ಪ್ರತಿಯೊಂದು ಮನೆಗೂ ನೀರುತರಲು ಗಾಡಿಗಳು ಇದ್ದುದೂರದ ನೀರಿಗಾಗಿ ವೃದ್ದರು, ಮಕ್ಕಳು, ಮಹಿಕಳೆಯರು ಪರದಾಡುವಂತಾಗಿದೆ.


ಕೊತ್ತಲಚಿಂತ ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ನೀರುಖಾಲಿಯಾದಲ್ಲಿ ಕುಡಿಯಲು ಬೋರ್‌ವೆಲ್‌ನ ಪ್ಲೋರೈಡ್‌ಯುಕ್ತ ನೀರೇಗತಿಯಾಗಿದೆ.

ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು, ವಿಶೇಷ ದಿನಗಳಂದು ನೀರಿನ ಬವಣೆ ತಪ್ಪದಾಗಿದ್ದು, ಸಮಸ್ಯೆ ಪರಿಹಾರಕ್ಕೆ ಕ್ರಮವಹಿಸದ ಅಧಿಕಾರಿಗಳ ವಿರುದ್ದ ಇಡೀ ಗ್ರಾಮಸ್ಥರೇ ಹಿಡಿಶಾಪ ಹಾಕುತ್ತಿದ್ದಾರೆ.

ಇನ್ನು ಮುಂದಾದರೂ ಸಂಬಂದಿಸಿದ ಮೇಲಾಧಿಕಾ–ರಿಗಳು ಸೂಕ್ತ ಗಮನವಹಿಸಿ ಸಂಬಂದಿಸಿದ ಅಧಿಕಾರಿಗಳ ವಿರುದ್ದ ಸೂಕ್ತ ಕ್ರಮ ಜರುಗಿಸಿ ಗ್ರಾಮಕ್ಕೆ ನೀರಿನ ಬವಣೆತಪ್ಪಿಸ ಬೇಕೆಂದು ಗ್ರಾಮಸ್ಥರಾದ ವೀರಬಸವನಗೌಡ, ರುದ್ರಗೌಡ, ವಿರುಪಾಕ್ಷಿಗೌಡ ಒತ್ತಾಯಿಸಿದರು.

## ರಾವಿಹಾಳ್ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಸ್ವಚ್ಚತೆಯೂ ಮರೀಚಿಕೆ

ಸಿರುಗುಪ್ಪ : ತಾಲೂಕಿನ ರಾವಿಹಾಳ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೂಕ್ತ ವೈದ್ಯರು ಹಾಗೂ ಸಿಬ್ಬಂದಿಗಳಿಲ್ಲದೇ ಚಿಕಿತ್ಸೆಗಾಗಿ ಬಂದರೋಗಿಗಳು ಪರದಾಡುವಂತಾಗಿದೆ. ಸ್ಥಳೀಯವಾಗಿ ವಸತಿ ಗೃಹಗಳಿದ್ದರೂ ವೈದ್ಯರು ನೆರೆಯ–ಆಂದ್ರ ಪ್ರದೇಶದ ಗಡಿಭಾಗದಿಂದ ಆರೋಗ್ಯ ಕೇಂದ್ರಕ್ಕೆ ಸಂಚರಿಸುತ್ತಿರುವುದ–ರಿಂದ ಕೆಲವೊಮ್ಮೆ ತುರ್ತುವೇಳೆಯಲ್ಲಿ ವೈದ್ಯರಿಲ್ಲದೇ ನರ್ಸಿಂಗ್ ಸಿಬ್ಬಂದಿಯವರೇ ಆರೋಗ್ಯತಪಾಸಣೆ ಮುಂದಾಗುತ್ತಿದ್ದು, ಎಲ್ಲರಿಗೂ ಒಂದೇ ತರಹದ ಔಷದಿಗಳು ನೀಡುತ್ತಿದ್ದಾರೆಂದು ತಪಾಸಣೆಗೆಂದು




ಬಂದಿದ್ದ ಮಲ್ಲಯ್ಯ ಆರೋಪಿಸಿದರು.

ಆಸ್ಪತ್ರೆಯ ಒಳಗಡೆ ಮುಖ್ಯ ಔಷದಿ ಸಂಗ್ರಹಣ ಕೊಠಡಿ, ಚುಚ್ಚುಮದ್ದು ಕೊಠಡಿ, ಡ್ರೆಸ್ಸಿಂಗ್ ಕೊಠಡಿಗಳು ಬಾಗಿಲು ಹಾಕಿದ್ದು, ಆರೋಗ್ಯಕೇಂದ್ರದಲ್ಲಿ 12ಜನ ಸಿಬ್ಬಂದಿಯಲ್ಲಿ ಕೇವಲ 2ಜನ ಮಾತ್ರ ಸಿಬ್ಬಂದಿಗಳಿದ್ದು ಪತ್ರಿಕೆಗೆ ಪೋಟೋ ತೆಗೆಯುವುದನ್ನು ಕಂಡು ಮಹಿಳಾ ಸಿಬ್ಬಂದಿಯನ್ನು ಕರೆ ಮಾಡಿಕರೆಸುತ್ತಿರುವುದುಕಂಡುಬಂದಿತು.

ಆರೋಗ್ಯಕೇಂದ್ರದ ಹೊರಾಂಗಣ ಮತ್ತು ಒಳಾಂಗಣದಲ್ಲಿ ಎಲ್ಲೆಂದರಲ್ಲೇ ಕಸ ಹಾಗೂ ವೈದ್ಯಕೀಯ ತ್ಯಾಜ್ಯಗಳು ಬಿದ್ದಿರುವುದುಕಂಡುಬಂದಿತು.

ತಮ್ಮಆರೋಗ್ಯತಪಾಸಣೆಗೆಂದು ಬರುವ ರೋಗಿಗಳಿಗೆ ಆಸ್ಪತ್ರೆಯಲ್ಲಿನ ವೈದ್ಯರು ಮತ್ತು ಸಿಬ್ಬಂದಿ ಕೊರತೆ ಹಾಗೂ ಅನಾರೋಗ್ಯದ ವಾತಾವರಣವು ರೋಗಾಣುಗಳನ್ನು ಹೆಚ್ಚಿಸುವಂತಿದೆ.

ಆವರಣದಲ್ಲಿ ಕಟ್ಟಡಗಳನ್ನು ನಿರ್ಮಿಸಿ ಹಲವು ವರ್ಷಗಳೇ ಕಳೆದರೂ ಕಾಮಗಾರಿ ಪೂರ್ಣ ಗೊಂಡಿಲ್ಲವಾದರೂ ಮತ್ತೇ ಹೊಸ ಕಟ್ಟಡಗಳಿಗೆ ಕಾಮಗಾರಿ ಆರಂಭವಾಗಿದ್ದು, ಇದ್ದ ಕೊಠಡಿಗಳಿಗೆ ಸರಿಯಾಗಿ ಸಿಬ್ಬಂದಿಗಳಿಲ್ಲ ಮತ್ತೆ ನೂತನ ಕಟ್ಟಡಗಳು ಯಾವ ಪುರುಷಾಥ–'ಕ್ಕೆ ಎಂದು ಸಾರ್ವಜನಿಕ ವಲಯದಲ್ಲಿ ಪ್ರಶ್ನಿಸಲಾಗುತ್ತಿದೆ.

ಇನ್ನು ಮುಂದಾದರೂ ಸಂಬಂದಿಸಿದ ಅಧಿಕಾರಿಗಳ ವಿರುದ್ದ ಮೇಲಾಧಿಕಾರಿಗಳು ಸೂಕ್ತ ಕ್ರಮ ಜರುಗಿಸಿ ಗಡಿಭಾಗದಲ್ಲಿನ ಗ್ರಾಮಗಳ ಜನರಆರೋಗ್ಯಕ್ಕೆ ಸಹಕರಿ ಸಬೇಕೆಂಬುದು ಗ್ರಾಮಸ್ಥರ ಒತ್ತಾಯವಾಗಿದೆ.

## ಸಿದ್ದರಾಮಯ್ಯ ಪ್ರಮಾಣ ವಚನ ಹಾಲುಮತ ಸಮಾಜದಿಂದ ವಿಜಯೋತ್ಸವ

ತಾಳಿಕೊಟೆ: ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವಿಕರಿಸುತ್ತಿದ್ದಂತೆ ಕುರುಬರ(ಹಾಲುಮತ) ಸಮಾಜ ಬಾಂದವರು ಶನಿವಾರರಂದು ಪಟ್ಟಣದ ಸಂಗೋಳಿ ರಾಯಣ್ಣ ವೃತ್ತದಲ್ಲಿ ಪಟಾಕ್ಷೀ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಸಮಾಜದ ಮುಖಂಡ ಎಸ್. ಎಚ್.ಪೂಜಾರಿ ಅವರು ಮಾತನಾಡಿ ಸಿದ್ದರಾಮಯ್ಯನವರು ಹಾಲುಮತ ಸಮಾಜದಲ್ಲಿ ಜನಿಸಿದ್ದರೂ ಕೂಡಾ ರಾಜ್ಯದ ಜನರ ಏಳಿಗೆ ಬಯಸುವ ಒಂದು ಶಕ್ತಿಯಾಗಿ ಪರಿಣಮಿಸಿದ್ದಾರೆ ದೀನ, ದಲಿತರ, ಶೋಶಿತ ವರ್ಗದವರ ದ್ವನಿಯಾಗಿ ಅವರ ಏಳಿಗೆಗೆ ಶ್ರಮಿಸಿದಂತವರಾಗಿದ್ದಾರೆ ಎರಡನೇ ಭಾ–ರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಸಿದ್ದರಾಮಯ್ಯನ ವರು



ರಾಜ್ಯವನ್ನು ಅಭಿವೃದ್ದಿಯತ್ತ ಕೊಂಡೊಯಲಿದ್ದಾರೆಂದರು.

ಇನ್ನೋರ್ವ ಸಮಾಜದ ಮುಖಂಡ ದೇವರಾಜ ಬಾಗೇವಾಡಿ, ಕಾಂಗ್ರೇಸ್ ಮುಖಂಡ ಪ್ರಭುಗೌಡ ಮದರಕಲ್ಲ, ಜೈಭೀಮ ಮುತ್ತಗಿ, ಅವರು ಮಾತನಾಡಿದರು.

ಈ ಸಮಯದಲ್ಲಿ ತಾಲೂಕಾ ಕುರುಬರ ಸಂಘದ ಅಧ್ಯಕ್ಷ ಸಾಹೇಬಣ್ಣ ಆಲ್ಯಾಳ, ನೌಕರರ ಸಂಘದ ಅಧ್ಯಕ್ಷ ಡಾ. ಆಯ್.ಬಿ.ತಳ್ಳೋಳ್ಳಿ, ಮಲ್ಲಣ್ಣ ಹಿರೇಕುರುಬರ, ಸುರೇಶ ವಾಲಿಕಾರ, ಕಾಂಗ್ರೇಸ್ ಮುಖಂಡರುಗಳಾದ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ.ಕಟ್ಟಿಮನಿ, ಪರಶುರಾಮ ತಂಗಡಗಿ, ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಮುಸ್ತಫಾ ಚೌದ್ರಿ, ಜಟ್ಟೆಪ್ಪ ಪೂಜಾರಿ, ಜುಮ್ಮಣ್ಣ, ಜಗದೀಶ, ಪರಶುರಾಮ ಅಮಲ್ಯಾಳ, ಮಲ್ಲು ನಾಯ್ಕಲ್, ಸಿದ್ದರೂಡ, ಇದ್ದರು.




ಬಳ್ಳಾರಿ: ಬಳ್ಳಾರಿ ನಗರದ ಜಿಲ್ಲಾಧಿಕಾರಿಗಳ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರರ್ತರ ಸಂಘದ ಸದಸ್ಯ–ರಿಗೆ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಭಾಷಾ ಗುರುತಿನ ಚೀಟಿಗಳನ್ನು ವಿತ–ರಿಸಿದರು.ಇದೇ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ರವಿ, ಉಪಾಧ್ಯಕ್ಷರಾದ ಬಜಾರಪ್ಪ, ಸದಸ್ಯರಾದ ಜಂಬುನಾಥ್, ರಘುರಾಮ್ ಶೆಟ್ಟಿ, ಹನುಮೇಶ್ ರಾವ್, ಕಿನ್ನೂರೇಶ್ವರ, ಗುರುಶಾಂತಪ್ಪ, ಪ್ರವೀಣ್ ರಾಜ್, ವೆಂಕಟೇಶ್ ದೇಸಾಯಿ, ಬಿ ಮಲ್ಲಯ್ಯ ಅಬೂಬಕರ್ ಸಿದ್ದಿಕ್, ಮಲ್ಲಿಕಾರ್ಜುನ, ಈ ಗೋವರ್ಧನ್ ರೆಡ್ಡಿ, ಪ್ರಸಾದ್, ಅಸ್ಲಾಂಭಾಷಾ ವೀರೇಶ್, ರಾಕೇಶ್, ಅಶೋಕ್ , ಹೊನ್ನೂರಸ್ವಾಮಿ, ಸೇರಿದಂತೆ ಇತರರಿದ್ದರು.

## ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಯಿಂದ ಹಸಿರು ಒಲೆ ವಿತರಣೆ



ಸಿರುಗುಪ್ಪ : ನಗರದ ಪಾರ್ವತಿ ನಗರದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಕಛೇರಿಯಲ್ಲಿ ತಾಲೂಕು ಯೋಜನಾಧಿಕಾರಿ ಸುಧೀರ್ ಅಂಗಳೂರು ಅವರು 60ಕ್ಕೂ ಅಧಿಕ ಮಹಿಳಾ ಫಲಾನುಭವಿಗಳಿಗೆ ಹಸಿರು ಒಲೆ ವಿತರಿಸಿದರು.

## ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಿದ್ದರಾಮಯ್ಯಗೆ ದಲೈಲಾಮಾ ಅಭಿನಂದನೆ

ಧರ್ಮಶಾಲಾ: ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದ್ದಾರೆ.

ಚೀನಾ 1959ರಲ್ಲಿ ಟಿಬೆಟ್ ಅನ್ನು ಅತಿಕ್ರಮಿಸಿ, ದಲೈ ಲಾಮಾರನ್ನು ಗಡಿಪಾರು ಮಾಡಿತು. ಬಳಿಕ ಭಾರತ ಅವರಿಗೆ ಆಶ್ರಯ ನೀಡಿದ್ದು, ಕಳೆದ 64 ವರ್ಷಗಳಿಂದ ಅವರು ಭಾರತದ ಧರ್ಮಶಾಲಾದಲ್ಲೆ? ನೆಲೆಸಿದ್ದಾರೆ.

ಕಳೆದ ಏಪ್ರಿಲ್‌ಗೆ ತಾವು ಭಾರತದಲ್ಲಿ ನೆಲೆಸಿ 64 ವರ್ಷಗಳು ಕಳೆದಿದ್ದು, ವಾರ್ಷಿಕೋತ್ಸವದ ವೇಳೆ, 'ಆ ಸಮಯದಲ್ಲಿ ಭಾರತಕ್ಕೆ ಪಲಾಯನ ಮಾಡುತ್ತಿರುವ ಅನೇಕ ಟಿಬೆಟಿಯನ್ನರ ಪುನರ್ವಸತಿಗಾಗಿ ಸೂಕ್ತ ಸ್ಥಳವನ್ನು ಹುಡುಕುವ ಸಲುವಾಗಿ, ಅಂದಿನ ಪ್ರಧಾನಿ ಪಂಡಿತ್ ನೆಹರು ಅವರು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಭೂಮಿ ಒದಗಿಸಲು ಮನವಿ ಮಾಡಿದರು. ಆಗ ನಿಮ್ಮ ರಾಜ್ಯದ ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರಿಂದ ಅತ್ಯಂತ ಉದಾರವಾದ ಪ್ರತಿಕ್ರಿಯೆ ಬಂದಿತ್ತು.

1956ರಲ್ಲಿ ನಾನು ಭಾರತಕ್ಕೆ ಭೇಟಿ ನೀಡಿದಾಗ ನಾನು ಅವರನ್ನು



ಭೇಟಿಯಾಗಿದ್ದೆ ಮತ್ತು ಆ ಸಭೆಯ ಬಗ್ಗೆ ಸ್ಪಷ್ಟವಾದ ಸ್ಮರಣೆಯನ್ನು ಹೊಂದಿದ್ದೇನೆ' ಎಂದಿದ್ದಾರೆ.

ತರುವಾಯ, ನಿಮಗೆ ತಿಳಿದಿರುವಂತೆ 1960 ರ ದಶಕದಲ್ಲಿ ದೇಶದಿಂದ ಹೊರಗೆ ಕಳುಹಿಸಲಾದ ಟಿಬೆಟಿಯನ್ನರ ಅತಿದೊಡ್ಡ ಗುಂಪಾದ 30,000ಕ್ಕೂ ಹೆಚ್ಚು ಟಿಬೆಟಿಯನ್ನರು ಕರ್ನಾಟಕದಲ್ಲಿ ನೆಲೆಸಿದರು. ನಾನು ಕರ್ನಾಟಕ ರಾಜ್ಯಕ್ಕೆ ಕೃತಜ್ಞರಾಗಿರುತ್ತೇನೆ ಮತ್ತು 2018ರ ಆಗಸ್ಟ್‌ನಲ್ಲಿ ರಾಜ್ಯ ಮತ್ತು ಅದರ ಜನರ ಸ್ನೇಹ ಮತ್ತು ಉದಾರ ಬೆಂಬಲಕ್ಕಾಗಿ ಧನ್ಯವಾದ ಸಲ್ಲಿಸಲು ಬೆಂಗಳೂರಿನಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಭಾಗವಹಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಟಿಬೆಟಿಯನ್ ಸಮುದಾಯಗಳಿಗೆ ಪುನರ್ವಸತಿ ಕಲ್ಪಿಸಲು ಕರ್ನಾಟಕದಲ್ಲಿ ಐದು ವಸತಿ ವಸಾಹತುಗಳನ್ನು ಸ್ಥಾಪಿಸುವುದರ ಜೊತೆಗೆ, ನಮ್ಮ ಅನೇಕ ಪ್ರಮುಖ ಸನ್ಯಾಸಿಗಳ ಕಲಿಕಾ ಕೇಂದ್ರಗಳನ್ನು ಪುನಃ ಸ್ಥಾಪಿಸಿದ ರಾಜ್ಯವೂ ಅದಾಗಿದೆ ಎಂಬ ಹೆಮ್ಮೆ ನನಗೆ ಇದೆ.

ನಾವು ಟಿಬೆಟಿಯನ್ನರು ನಳಂದಾ ಸಂಪ್ರದಾಯದ ಭಾಗವಾಗಿ ಸ್ವೀಕರಿಸಿದ ಮನಸ್ಸಿನ ಶಾಂತಿಯನ್ನು ಸಾಧಿಸಲು ಅಮೂಲ್ಯವಾದ ಸೂಚನೆಗಳನ್ನು ಒಳಗೊಂಡಂತೆ ಕಠಿಣ ಅಧ್ಯಯನದ ಕಾರ್ಯಕ್ರಮಗಳ ಮೂಲಕ ಈ ಸಂಸ್ಥೆಗಳು ಪ್ರಾಚೀನ ಭಾರತೀಯ ಸಂಪ್ರದಾಯಗಳನ್ನು ಜೀವಂತವಾಗಿರಿಸುತ್ತಿವೆ ಎಂದು ತಿಳಿಸಿದ್ದಾರೆ.

ಆದ್ದರಿಂದ, ಸಂದಿಗ್ಧ ಸಮಯದಲ್ಲಿ ಟಿಬೆಟಿಯನ್ನ–ರಿಗೆ ನೀಡಿದ ಆತ್ಮೀಯ ಮತ್ತು ಸ್ನೇಹಪರ ಬೆಂಬಲಕ್ಕಾಗಿ ಕರ್ನಾಟಕ ಸರ್ಕಾರ ಮತ್ತು ಜನ–ರಿಗೆ ಮತ್ತೊಮ್ಮೆ ನಮ್ಮ ಆಳವಾದ ಕೃತಜ್ಞತೆಯನ್ನು ವ್ಯಕ್ತಪಡಿಸಲು ನಾನು ಬಯಸುತ್ತೇನೆ' ಎಂದು ಹೇಳಿದರು.

ಕರ್ನಾಟಕದ ಜನತೆಯ ಆಶಯ ಮತ್ತು ಆಕಾಂಕ್ಷೆಗಳನ್ನು ಈಡೇ–ರಿಸುವಲ್ಲಿ ಎದುರಾಗಬಹುದಾದ ಸವಾಲುಗಳನ್ನು ಎದುರಿಸುವಲ್ಲಿ ನೀವು ಯಶಸ್ವಿಯಾಗಬೇಕೆಂದು ನಾನು ಬಯಸುತ್ತೇನೆ' ಎಂದಿದ್ದಾರೆ.

## ದೇವರಹಿಪ್ಪರಗಿಯಿಂದ 48 ಕೀ.ಮೀ. ಶ್ರೀ ಖಾಸ್ಗತ ಮಠಕ್ಕೆ ದೀಡ ನಮಸ್ಕಾರ

ತಾಳಿಕೊಟೆ: ದೇವರ ಹಿಪ್ಪರಗಿ ಮತಕ್ಷೇತ್ರದ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ದಿಸಿದ್ದ ರಾಜುಗೌಡ ಪಾಟೀಲ ಅವರು ಶಾಸಕರಾಗಿ ಆಯ್ಕೆಯಾಗಲೆಂದು ಹರಕೆ ಹೊತ್ತಿದ್ದ ದೇವರ ಹಿಪ್ಪರಗಿ ಪಟ್ಟಣದ ಅಭಿಮಾನಿಯೊಬ್ಬರು ಬೇಡಿಕೆ ಇಡೇರಿದ್ದರಿಂದ ಸುಮಾರು 48 ಕೀ.ಮೀ. ಅಂತರದ ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠಕ್ಕೆ ದೀಡ ನಮಸ್ಕಾರ ಹಾಕಿ ಶನಿವಾರರಂದು ಹರಕೆ ತೀರಿಸಿದ್ದಾರೆ.

ದೇವರಹಿಪ್ಪರಗಿ ಪಟ್ಟಣದ ಹಣಮಂತ ಹೂಗಾರ ಎಂಬವರು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಅವರ ಅಭಿಮಾನಿಯು ದೇವರ ಹಿಪ್ಪರಗಿ ಪಟ್ಟಣದ ಶ್ರೀ ರಾವುತರಾಯ ದೇವಸ್ಥಾನದಿಂದ 48 ಕೀಲೋ ಮೀಟರ್ ಅಂತರದ



ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದವರೆಗೆ ದೀಡ ನಮಸ್ಕಾರ ಹಾಕಿದ್ದಾನೆ. ಅವನು ಹರಕೆಯು ಹೊತ್ತಂತೆ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ರಾಜುಗೌಡ ಪಾಟೀಲ ಕುದರಿ ಸಾಲವಾಡಗಿ ಅವರು ಸುಮಾರು 20 ಸಾವಿರಕ್ಕೂ ಅಧಿಕ ಅತ್ಯಧಿಕ ಮತಗಳಿಂದ ಜಯ ಶಾಲಿಯಾಗಿದ್ದಾರೆ.

ಹೀಗಾಗಿ ರಾಜುಗೌಡ ಪಾಟೀಲ ಅವರ ಅಪ್ಪಟ ಅಭಿಮಾನಿ ಹಣಮಂತ ಹೂಗಾರ ಅವರು ದಿ.15 ಸೋಮವಾರರಂದು ಪ್ರಾರಂಬಿಸಿದ ದೀಡ ನಮಸ್ಕಾರವು 6ನೇ ದಿನ ಶನಿವಾರರಂದು ತಾಳಿಕೋಟೆಯ ಶ್ರೀ ಖಾಸ್ಗತ ಮಠಕ್ಕೆ ತಲುಪಿ ತನ್ನ ಹರಕೆಯನ್ನು ತೀರಿಸಿದ್ದಾನೆ. ನಂತರ ಶ್ರೀ ಖಾಸ್ಗತ ಮಠದಲ್ಲಿ ಶ್ರೀ ಖಾಸ್ಗತರ, ವೀರಕ್ತಶ್ರೀಗಳ ಗದ್ದುಗೆಗೆ ಮಹಾ ಪೂಜೆ ಸಲ್ಲಿಸಿ ಶ್ರೀಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗಶ್ರೀಗಳಿಂದ ಹಣಮಂತ ಹೂಗಾರ ಅವರು ತಮ್ಮ ಧರ್ಮಪತ್ನಿ ಅಂಬಿಕಾ ಹೂಗಾರ ಅವರೊಂದಿಗೆ ಆಶಿರ್ವಾದ ಪಡೆದುಕೊಂಡರು.

ಇದೇ ಸಮಯದಲ್ಲಿ ಶಾಸಕ ರಾಜುಗೌಡ ಪಾಟೀಲ ಅವರ ಧರ್ಮಪತ್ನಿ ಶ್ರೀಮತಿ ಜಯಶ್ರೀಗೌಡತಿ ಪಾಟೀಲ, ಶಾಸಕರ ಸಹೋದರ ಸಚೀನಗೌಡ ಪಾಟೀಲ ಅಲ್ಲದೇ ತಾಳಿಕೋಟೆ ಪುರಸಭಾ ಸದಸ್ಯ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ಅವರು ದೀಡ ನಮಸ್ಕಾರ ಹಾಕಿದ ಹಣಮಂತ ಹೂಗಾರ ಹಾಗೂ ಧರ್ಮಪತ್ನಿ ಅಂಬಿಕಾ ಹೂಗಾರ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಈ ಸಮಯದಲ್ಲಿ ಶಾಸಕ ರಾಜುಗೌಡ ಪಾಟೀಲ ಅವರ ಧರ್ಮಪತ್ನಿ ಶ್ರೀಮತಿ ಜಯಶ್ರೀಗೌಡತಿ ಪಾಟೀಲ, ಶಾಸಕರ ಸಹೋದರ ಸಚೀನಗೌಡ ಪಾಟೀಲ, ಮುಖಂಡರಾದ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಕಾಸುಗೌಡ ಬಿರಾದಾರ, ವಿನೋದಗೌಡ ಪಾಟೀಲ, ವಿಜುಗೌಡ ಪಾಟೀಲ, ಸಂಗನಗೌಡ ಪಾಟೀಲ, ವಿರೇಶ ಕುದರಿ, ಶಿವು ಕಲ್ಬುರ್ಗಿ, ನಿಂಗಣ್ಣ ಕಲ್ಬುರ್ಗಿ, ಜಗನ್ನಾಥ ಮಸರಕಲ್ಲ, ಉಮೇಶ ಮೈಲೇಶ್ವರ, ಈರಣ್ಣ ಕಲ್ಬುರ್ಗಿ, ಸಾಹೇಬಗೌಡ ಪಾಟೀಲ, ಅಂಬ್ರೇಷ ಇಂಗಳಗಿ, ಚಂದ್ರು ಗೆಜ್ಜಿ, ಬಸ್ಸು ಕುಂಭಾರ, ಕಾಸು ಜಡಕಟ್ಟಿ, ನಿಂಗು ಎಂಬತನಾಳ, ಪರಮನಗೌಡ ಪಾಟೀಲ, ದೀನೇಶಗೌಡ ಪಾಟೀಲ, ಕಾಸು ಕೋಟಿನ, ಶ್ರೀಮತಿ ರೇಣುಕಾ ಕೋಟಿನ, ರಾಮು ಸಣ್ಣಕ್ಕಿ, ಮಲ್ಲಮ್ಮ ಸಣ್ಣಕ್ಕಿ, ಮೊದಲಾದವರು ಇದ್ದರು.




BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089



## ಗ್ರಾಮೀಣ ಶಾಸಕ ನಾಗೇಂದ್ರಗೆ ಸಚಿವಸ್ಥಾನ ನೀಡಿ: ಶೇಖ್‌ಮೂಸಾ ಒತ್ತಾಯ

ಬಳ್ಳಾರಿ: ಬಳ್ಳಾರಿ ಗ್ರಾಮೀಣ ಶಾಸಕ ಶ್ರೀರಾಮುಲು ವಿರುದ್ಧ ಕಣಕ್ಕಿಳಿದು ಅಭೂತ ಪೂರ್ವ ಗೆಲುವನ್ನು ಸಾಧಿಸಿದ್ದಾರೆ. ಜನರು ನಾಗೇಂದ್ರನವರ ಮೇಲೇ ವಿಶ್ವಾಸವನ್ನಿಟ್ಟು ಬಹುಮತದಿಂದ ಗೆಲ್ಲಿಸಿದ್ದಾರೆ.

ಬಳ್ಳಾರಿ ಗ್ರಾಮೀಣ ಕ್ಷೇತ್ರ ಇನ್ನಷ್ಟು ಅಭಿವೃದ್ಧಿಯಾಗಬೇಕಂದರೇ ನಾಗೇಂದ್ರನವರಿಗೆ ಸಚಿವ ಸ್ಥಾನ ನೀಡಲೇಬೇಕೆಂದು ಶೇಖ್‌ಮೂಸಾ ಅವರು ಒತ್ತಾಯಿಸಿದ್ದಾರೆ.

ಬಿ.ನಾಗೇಂದ್ರ ಅವರು ಈ ಹಿಂದೆ ಬಿ.ಜೆ.ಪಿಯವರು ಒಡ್ಡಿದ ಹಣ ಮತ್ತು ಅಧಿಕಾರದ ಅಮಿಷಗಳಿಗೆ ಸೋತು ಪಕ್ಷಾಂತರ ಮಾಡದೇ ಪಕ್ಷ ನಿಷ್ಠರಾಗಿ ಮತ್ತು ಸಿದ್ದರಾಮಯ್ಯನವರ ಪಟ್ಟಾ ಶಿಷ್ಯನಾಗಿ ಗುರುತಿಸಿಕೊಂಡು ಪಕ್ಷ ನಿಷ್ಠೆ ಮತ್ತು ಸ್ವಾಮಿ ನಿಷ್ಠೆ ಮೆರೆದಿದ್ದಾರೆ,

ಅದಕ್ಕಾಗಿ ಮಂತ್ರಿ ಪದವಿ ನೀಡಲೇಬೇಕೆಂದು ಮುಖಂಡರು ಕಾಂಗ್ರೆಸ್ ಪಕ್ಷದ ರಾಜ್ಯ ಹೈಕಮಾಂಡನ್ನು ಒತ್ತಾಯಿಸಿದ್ದಾರೆ.

# ಜಿಲ್ಲೆಯ ರಾಜಕೀಯದಲ್ಲಿ ತನ್ನದೆಯಾದ ಛಾಪು ಮೂಡಿಸಿರುವ ಹುಕ್ಕೇರಿ ತಾಲೂಕು

ಹುಕ್ಕೇರಿ: ಜಿಲ್ಲೆಯ ರಾಜಕೀಯದಲ್ಲಿ ತನ್ನದೆಯಾದ ಛಾಪು ಮೂಡಿಸಿರುವ ಹುಕ್ಕೇರಿ ತಾಲೂಕು ವಿಶೇಷತೆಯಿಂದ ಪ್ರಸಿದ್ಧಿ ಪಡೆದುಕೊಂಡಿದೆ. ರಾಜ್ಯದಲ್ಲಿ ಯಾವುದೇ ಪಕ್ಷದ ಆಡಳಿತ ಸರಕಾರವಿದ್ದರೂ ಹುಕ್ಕೇರಿ ತಾಲೂಕಿನಿಂದ ಆಯ್ಕೆಯಾಗುವ ಶಾಸಕರು ಮಾತ್ರ ಆಡಳಿತ ಸರಕಾರದಲ್ಲಿ ಸಚಿವರಾಗುವದು ವಿಶೇಷ.

ತಾಲೂಕಿನ ಯಮಕನಮರಡಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸತೀಶ ಜಾರಕಿಹೊಳಿ ಸಚಿವರಾಗಿ ಅಧಿಕಾರ ಸ್ವೀಕರಿಸಿದರು.

ಹುಕ್ಕೇರಿ ತಾಲೂಕಿನಲ್ಲಿ ಎರಡು ವಿಧಾನ ಸಭಾ ಕ್ಷೇತ್ರಗಳವೆ. 2008 ರ ಕ್ಷೇತ್ರ



ವಿಂಗಡಣೆಯ ಮೊದಲು ಪೂರ್ವಕ್ಕೆ ಹುಕ್ಕೇರಿ. ಹಾಗೂ ಪಶ್ಚಿಮಕ್ಕೆ ಸಂಕೇಶ್ವರ ಎಂಬ ಎರಡು ವಿಧಾನ ಸಭಾ ಕ್ಷೇತ್ರಗಳಿದ್ದವು.

ಹುಕ್ಕೇರಿ ಕ್ಷೇತ್ರದಿಂದ 9 ಸಲ ಚುನಾವಣೆ ಎದುರಿಸಿದ ಉತ್ತರ ಕರ್ನಾಟಕದ ಪ್ರಭಾವಿ ನಾಯಕ ಉಮೇಶ ಕತ್ತಿ ಅವರು ನಾಲ್ಕು ಬಾರಿ. ವಿವಿಧ ಇಲಾಖೆಯ ಕೃಷಿ, ತೋಟಗಾರಿಕೆ, ಬಂದಿಖಾನೆ, ಲೋಕೋಪಯೋಗಿ, ಸಕ್ಕರೆ, ಅರಣ್ಯ ,ಆಹಾರ ಸಚಿವರಾಗಿ ಕಾರ್ಯ ನಿರ್ವಹಿಸಿದರು. ಹಾಗೂ ಒಮ್ಮೆ ಮಾಜಿ ಸಚಿವ ಶಶಿಕಾಂತ ನಾಯಿಕ ತೋಟಗಾರಿಕೆ ಸಚಿವರಾಗಿದ್ದರು.

ಸಂಕೇಶ್ವರ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ ನಿಂದ ಮಲ್ಲಾರಿಗೌಡ ಪಾಟೀಲ , ನೀರಾವರಿ ಜನತಾ ದಳದಿಂದ ,ಎ.ಬಿ ಪಾಟೀಲ ,ಭೂ ಗಣಿ ಮತ್ತು ಸಚ್ಚಿದಾನಂದ ಖೋತ ವಿಧಾನ ಪರಿಷತ್ ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

2008 ರ ಕ್ಷೇತ್ರ ವಿಂಗಡಣೆಯ ನಂತರ ಸಂಕೇಶ್ವರ ಬದಲಾಗಿ ಉತ್ತರಕ್ಕೆ ಹುಕ್ಕೇರಿ ವಿಧಾನ ಸಭಾ ಕ್ಷೇತ್ರ,ಹಾಗೂ ದಕ್ಷಿಣಕ್ಕೆ ಯಮಕನಮರಡಿ (ಮೀಸಲು) ಕ್ಷೇತ್ರ ಅಸ್ತಿತ್ವಕ್ಕೆ ತರಲಾಯಿತು.

ಹುಕ್ಕೇರಿ ಕ್ಷೇತ್ರದಿಂದ 1985 ರಿಂದ ಪ್ರಭಾವಿ ನಾಯಕರಾಗಿದ್ದ ಉಮೇಶ ಕತ್ತಿ ಬಿಜೆಪಿಯಿಂದ ಪ್ರತಿನಿಧಿಸುತ್ತಿದ್ದರು.

ಅವರ ಅಕಾಲಿಕ ನಿಧನದಿಂದ ತೆರವಾದ ಸ್ಥಾನಕ್ಕೆ ಪುತ್ರ ನಿಖಿಲ್ ಕತ್ತಿ ಅವರು ಪ್ರಥಮವಾಗಿ ಲಕ್ಷಕ್ಕೂ ಹೆಚ್ಚು ಮತ ಪಡೆಯುವದರ ಮೂಲಕ ವಿಧಾನ ಸಭೆಗೆ ಆಯ್ಕೆಯಾದರು.

ಯಮಕನಮರಡಿ ಕ್ಷೇತ್ರ– ಕ್ಷೇತ್ರ ವಿಂಗಡನೆ ನಂತರ ಕೆ.ಪಿ.ಸಿ.ಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ 2008 ರಿಂದ ಮೂರು ಅವದಿಗೆ ಶಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಮ್ಮೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

2023 ರಲ್ಲಿ ಸತೀಶ ಜಾರಕಿಹೊಳಿ ಮತ್ತೆ ಗೆದ್ದು ಬಂದಿದ್ದಾರೆ .ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರ ಬಂದಿದ್ದರಿಂದ ಅವರು ಮತ್ತೆ ಸಚಿವರಾಗಿ ಕಾರ್ಯನಿರ್ವಹಿಸಲಿದ್ದಾರೆ.

# ಸಿದ್ಧರಾಮಯ್ಯ ಪ್ರಮಾಣ ವಚನ ಕಾಂಗ್ರೇಸ್ ಕಾರ್ಯಕರ್ತರ ವಿಜಯೋತ್ಸವ

ತಾಳಿಕೊಟೆ: ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಹಾಗೂ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ ಅವರು ಮತ್ತು 8 ಜನ ಶಾಸಕರು ಸಚೀವರಾಗಿ ಶನಿವಾರರಂದು ಪ್ರಮಾಣ ವಚನ ಸ್ವಿಕರಿಸುತ್ತಿದ್ದಂತೆ ತಾಳಿಕೋಟೆ ಪಟ್ಟಣದಲ್ಲಿ ಕಾಂಗ್ರೇಸ್ ಕಾರ್ಯಕರ್ತರು ಪಟಾಕ್ಷೀ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಸಂಭ್ರಮಾಚರಣೆ ಮಾಡಿದ ಕಾರ್ಯಕರ್ತರು ನಂತರ ಡಾ.ಬಿ.ಆರ್. ಅಂಬೇಡ್ಕರ್ ವೃತ್ತಕ್ಕೆ ತೆರಳಿ ಅಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿ ಗೌರವಿಸಿದರು.

ಈ ಸಮಯದಲ್ಲಿ ಕಾಂಗ್ರೇಸ್ ಯುವ ಘಟಕದ



ಮಾಜಿ ಅಧ್ಯಕ್ಷ ವಿಜಯಸಿಂಗ್ ಹಜೇರಿ ಅವರು ಮಾತನಾಡಿ ರಾಜ್ಯದಲ್ಲಿ ಕಾಂಗ್ರೇಸ್ ಸರ್ಕಾರವು ಉತ್ತಮ ಆಡಳಿತ ನೀಡಲಿದೆ ಭ್ರಷ್ಟಾಚಾರ ರಹೀತವಾದ ಆಡಳಿತವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತು ಡಿ.ಕೆ.ಶಿವಕುಮಾರ ಅವರು ನೀಡಲಿದ್ದಾರೆಂದ ಅವರು ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಸಿ.ಎಸ್.ನಾಡಗೌಡ ಅವರು 6ಭಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ರಾಜ್ಯದ ಹಿರಿಯ ಶಾಸಕರಲ್ಲಿ ಮತ್ತು ಪಕ್ಷ ನಿಷ್ಠೆಯಲ್ಲಿ ಗುರುತಿಸಿಕೊಂಡಂತವರಾಗಿದ್ದಾರೆ ಅವರಿಗೆ ಈ ಭಾರಿ ಅವರಿಗೆ ಸಚೀವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಇನ್ನೋರ್ವ ಮುಖಂಡರಾದ ಶ್ರೀಮತಿ ನೀಲಮ್ಮ ಪಾಟೀಲ ಅವರು ಮಾತನಾಡಿ ಕಾಂಗ್ರೇಸ್ ಪಕ್ಷದ ಏಳೆಗೆಗಾಗಿ ದುಡಿದಿರುವಂತಹ ಶಾಸಕ ನಾಡಗೌಡ ಅವರಿಗೆ ಈ ಭಾರಿ ಮಂತ್ರಿ ಭಾಗ್ಯ ಕೊಡಬೇಕು ಇಲ್ಲದಿದ್ದರೆ ಕಾಂಗ್ರೇಸ್ ಮಹಿಳಾ ಘಟಕದ ಕಾರ್ಯಕರ್ತರು ಬೀದಗಿಳಿದು ಹೋರಾಟ ಮಾಡುತ್ತೇವೆಂದರು.

ಮುಖಂಡರಾದ ಪ್ರಭುಗೌಡ ಮದರಕಲ್ಲ ಅವರು ಶಾಸಕ ಸಿ.ಎಸ್.ನಾಡಗೌಡ ಅವರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಕಾಂಗ್ರೇಸ್ ವರಿಷ್ಠರಲ್ಲಿ ಒತ್ತಾಯಿಸಿದರು.

# ಬೆಳಗಾವಿ: ಮಹಿಳೆಯ ಮೇಲೆ ಕರಡಿಗಳ ದಾಳಿ



ಬೆಳಗಾವಿ: ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತ ಮಹಿಳೆಯ ಮೇಲೆ ಎರಡು ಕರಡಿಗಳು ದಾಳಿ ಮಾಡಿದ ಪರಿಣಾಮವಾಗಿ ಮಹಿಳೆಯು ಗಂಭೀರವಾಗಿ ಗಾಯಗೊಂಡ ಘಟನೆ ಹೆಬ್ಬಾನಟ್ಟಿ ಸನಿಹದ ಹೊಲವೊಂದರಲ್ಲಿ ನಡೆದಿದೆ.

ರೇಣುಕಾ ಈರಪ್ಪ ನಾಯಿಕ (60) ಗಾಯಗೊಂಡ ಮಹಿಳೆ. ಇವರು ತಮ್ಮ ಹೊಲದಲ್ಲಿ ಕೆಲಸ ಮಾಡುವ ವೇಳೆ ಎರಡು ಕರಡಿಗಳು ಏಕಾಏಕಿ ದಾಳಿ ಮಾಡಿವೆ.

ಈ ದಾಳಿಯಿಂದ ಮಹಿಳೆಯ ತೆಲೆಗೆ ಬಲವಾದ ಗಾಯವಾಗಿದ್ದು, ಚಿಕಿತ್ಸೆಗಾಗಿ ಬೆಳಗಾವಿ ಆಸ್ಪತ್ರೆಗೆ ದಾಖಲಿಸಲಾಗಿದೆ.

## ರಾಜ್ಯ ಪ್ರಶಸ್ತಿ: ಕೈಮಗ್ಗ ನೇಕಾರರಿಂದ ಅರ್ಜಿ ಆಹ್ವಾನ

ಬೆಳಗಾವಿ: ಕೈಮಗ್ಗ ನೇಕಾರರ ಕೌಶಲ್ಯವನ್ನು ಗುರುತಿಸಿ ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಕೈಮಗ್ಗ ನೇಯ್ಗೆ ವೃತ್ತಿಯಲ್ಲಿ ನೈಪುಣ್ಯತೆ, ಶ್ರೇಷ್ಠತೆ, ತಾಂತ್ರಿಕತೆ, ಉತ್ಕೃಷ್ಟತೆ ಹೊಂದಿರುವ ಕೈಮಗ್ಗ ನೇಕಾರರಿಗೆ 2023–24ನೇ ಸಾಲಿನ ರಾಜ್ಯ ಪ್ರಶಸ್ತಿಯನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಉಪ ನಿರ್ದೇಶಕರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ, ಸಾಮರ್ಥ್ಯ ಸೌಧ ಕಟ್ಟಡ, ಹರಿಮಂದಿರ ರಸ್ತೆ, ಅನಗೋಳ, ಬೆಳಗಾವಿ ಕಛೇರಿಗೆ ಸಂಪರ್ಕಿಸಿ ಅರ್ಜಿಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಉತ್ಪನ್ನದ ಮಾದರಿ (Sample) ಯೊಂದಿಗೆ ಮೇ. 31 2023 ರ ಒಳಗಾಗಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0831–2950674 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪಂಚಾಯತ್ ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಧೀಕಾರೇತರ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ಬೆಳಗಾವಿ: ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995 ರ ಉಪನಿಯಮ 17 ರಿತ್ಯಾ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ರಚಿಸಲು ಸರ್ಕಾರದಿಂದ ಆದೇಶಿಸಿಲಾಗಿದ್ದು, ಸದರಿ ಸಮಿತಿಯಲ್ಲಿ 3 ಪರಿಶಿಷ್ಟ ಜಾತಿ ಮತ್ತು 2 ಪರಿಶಿಷ್ಟ ಪಂಗಡದ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದ 3 ಎನ್.ಜಿ.ಓ ಗಳ ಅಧೀಕಾರೇತರ ಸದಸ್ಯರುಗಳನ್ನು ನೇಮಕ ಮಾಡಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯದ ಸರ್ವತೋಮುಖ ಅಭಿವೃದ್ದಿಗಾಗಿ ಶ್ರಮಿಸಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ಎನ್.ಜಿ.ಓ ಗಳ ಆಸಕ್ತ ಸದಸ್ಯರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ಎನ್.ಜಿ.ಓ ಗಳ ಆಸಕ್ತ ಸದಸ್ಯರು ಅರ್ಜಿ ನಮೂನೆಗಾಗಿ ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕರು ಅಥವಾ ಜಿಲ್ಲೆಯ ಎಲ್ಲ ತಾಲೂಕಿನ ಸಹಾಯಕ ನಿರ್ದೇಶಕ ಸಮಾಜ ಕಲ್ಯಾಣ ಇಲಾಖೆ ಕಛೇರಿಗಳಿಂದ ಪಡೆದು ಜೂನ್ 5. 2023 ರಂದು ಸಂಜೆ 5 30 ರೊಳಗಾಗಿ ಭರ್ತಿ ಮಾಡಿ, ಅರ್ಜಿಗಳನ್ನು ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 11 ನೇ ಪದವಿ ಪ್ರಧಾನ ಸಮಾರಂಭ



ಭಾರತದೇಶದಲ್ಲಿ ಉದ್ದಿಮೆದಾರರಾಗಿ ಬೆಳೆಯಲು ವಿಪುಲ ಅವಕಾಶಗಳಿದ್ದು, ಮೇಕ್‌ಇನ್ ಇಂಡಿಯಾ ಹಾಗೂ ಸ್ಟಾರ್ಟಅಪ್ ಪ್ರಾರಂಭಿಸಲು ಸರಕಾರದ ವತಿಯಿಂದಎಲ್ಲ ಸೌಲಭ್ಯಗಳು ಲಭ್ಯವಿದ್ದು, ಅವುಗಳನ್ನು ಉಪಯೋಗಿಸಿಕೊಂಡು ಸ್ವಂತ ಉದ್ದಿಮೆದಾರರಾಗಬೇಕು ಎಂದು ಮುಖ್ಯ ಅತಿಥಿ ಸಿ.ಜಿ.ಕೆ. ಕನ್ಸಟ್ರಕ್ಶನ್ಸಿನ ವ್ಯವಸ್ಥಾಪಕ ನಿರ್ದೇಶಕಚೈತನ್ಯ ಜಿ. ಕುಲಕರ್ಣಿಕರೆ ನೀಡಿದರು.

ನಗರದ ಅಂಗಡಿತಾಂತ್ರಿಕ ಮತ್ತು ವ್ಯವಸ್ಥಾಪನಾ ಮಹಾವಿದ್ಯಾಲಯದಲ್ಲಿ ಶುಕ್ರವಾರ, ದಿನಾಂಕ 19ಮೇ, 2023ರಂದು11 ನೇ ಪದವಿ ಪ್ರಧಾನದಿನದ ಅಂಗವಾಗಿ ನಡೆದ ಸಮಾರಂಭವನ್ನು ಉಧ್ಘಾಟಿಸಿಅವರು ಮಾತನಾಡಿದರು.

ಮೊದಲಿಗೆ ಚೀನಾದೇಶದ ಗೊಂಬೆಗಳಿಗೆ ಬೇಡಿಕೆಯಿದ್ದು, ಈಗ ಬೆಳಗಾವಿಯಲ್ಲಿಯೇ ಭಾರತೀಯ ಗೊಂಬೆಗಳು ತಯಾರಾಗುತ್ತಿದ್ದು, ಕೋರಿಯಾ ಮತ್ತಿತರ ದೇಶದಗಳಲ್ಲಿ ಅಪಾರ ಬೇಡಿಕೆಇದೆ. ಇದಕ್ಕೆಲ್ಲ ಭಾರತ ಸರ್ಕಾರದ ಪ್ರೋತ್ಸಾಹ ದೊರಕಿದೆ. ಭಾರತದೇಶವು ಡಿಜಿಟಲ್ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ವಿದ್ಯಾರ್ಥಿಗಳು ಆತ್ಮವಿಶ್ವಾಸ ಹಾಗೂ ಧೃಡನಿಶ್ಚಯಗಳಿಂದ ಕೆಲಸಗಳಲ್ಲಿ ಶ್ರದ್ಧೆಯಿಂದ ದುಡಿಯಬೇಕೆಂದು ಕರೆ ನೀಡಿದರು.

ಅಧ್ಯಕ್ಷೀಯ ಭಾಷಣ ಮಾಡುತ್ತಾ ಸಂಸ್ಥೆಯ ಚೇರಮನ್ ಹಾಗೂ ಸಂಸದೆ ಮಂಗಲ ಸುರೇಶಅಂಗಡಿ ಮಾತನಾಡುತ್ತ, ಎಲ್ಲ ಪಾಲಕರೂತಮ್ಮ ಮಕ್ಕಳಿಗೆ ಸ್ವಂತ ಉದ್ದಿಮೆದಾರರಾಗಲು ಪ್ರೋತ್ಸಾಹಿಸಬೇಕು. ಭಾರತೀಯ ವಸ್ತುಗಳನ್ನು ತಯಾರಿಸಲು ಸರಕಾರಎಲ್ಲರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದು, ಅವುಗಳನ್ನು ಸದುಪಯೋಗ ಪಡೆಯಬೇಕೆಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ. ಆನಂದ ದೇಶಪಾಂಡೆ ಮಾತನಾಡುತ್ತ, ಎಲ್ಲ ಪದವಿದರರಿಗೆ ಶುಭಕೋರಿ ಭವಿಷ್ಯದಲ್ಲಿ ಕಾಲೇಜಿಗೆ ಕೀರ್ತಿತರುವಂತ ಕೆಲಸ ಮಾಡಬೇಕೆಂದು ತಿಳಿಸಿದರು.

ಪ್ರೊ. ಧನಶ್ರೀ ಕುಲಕರ್ಣಿ ಕಾಲೇಜಿನ ವಾರ್ಷಿಕ ವರದಿ ಸಾದರಪಡಿಸಿದರು.

ಸಮಾರಂಭದಲ್ಲಿ ಕಾಲೇಜಿನ ಎಲ್ಲ ವಿಭಾಗಗಳ ಮುಖ್ಯಸ್ಥರು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ, ಎಲ್ಲ ಪದವೀಧರ ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು.

# ಕೂಡಲೇ ನೀರು ಬಿಡುಗಡೆ ಮಾಡುವಂತೆ ಮನವಿ

ಗೋಕಾಕ: ಹಿಡಕಲ್ ಜಲಾಶಯದಿಂದ ಜಿಎಲ್‌ಬಿಸಿ, ಜಿಆರ್‌ಬಿಸಿ ಮತ್ತು ಸಿಬಿಸಿ ಕಾಲುವೆಗಳಿಗೆ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ಕೂಡಲೇ ನೀರನ್ನು ಬಿಡುಗಡೆ ಮಾಡುವಂತೆ ಅರಭಾವಿ ಶಾಸಕ ಹಾಗೂ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಬೆಳಗಾವಿ ಪ್ರಾದೇಶಿಕ ಆಯುಕ್ತರಿಗೆ ಮನವಿ ಮಾಡಿಕೊಂಡಿದ್ದಾರೆ.



ಈಗಾಗಲೇ ಹಿಡಕಲ್ ಜಲಾಶಯದಲ್ಲಿ 5.93 ಟಿಎಂಸಿ ನೀರು ಸಂಗ್ರಹವಿರುವದರಿಂದ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಂಬಂಧ ಬರುವ ಸೋಮವಾರದಿಂದ 7 ದಿನಗಳವರೆಗೆ ನೀರನ್ನು ಬಿಡುವಂತೆ ಅವರು ಆಗ್ರಹಿಸಿದ್ದಾರೆ.

ಬೇಸಿಗೆಯ ಬಿಸಿಲಿನಿಂದ ಮೂಡಲಗಿ, ಗೋಕಾಕ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ ತಾಲೂಕುಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಹಿಡಕಲ್ ಜಲಾಶಯದಿಂದ ಜಿಎಲ್‌ಬಿಸಿ ಕಾಲುವೆಗೆ 2000 ಕ್ಯೂಸೆಕ್ಸ್, ಜಿಆರ್‌ಬಿಸಿ ಕಾಲುವೆಗೆ 2000 ಕ್ಯೂಸೆಕ್ಸ್ ಮತ್ತು ಸಿಬಿಸಿ ಕಾಲುವೆಗೆ 500 ಕ್ಯೂಸೆಕ್ಸ್‌ನಂತೆ ಪ್ರತಿದಿನ ನೀರನ್ನು ಹರಿಸುವಂತೆ ತಿಳಿಸಿದ್ದಾರೆ.


ಈ ಕಾಲುವೆಗಳ ವ್ಯಾಪ್ತಿಯಲ್ಲಿ ಅಂತರ್ಜಲಮಟ್ಟ ಹೆಚ್ಚಳವಾಗಿ ತೆರೆದ ಬಾವಿ ಮತ್ತು ಕೊಳವೆ ಬಾವಿಗಳು ರಿಚಾರ್ಜ ಆಗುತ್ತವೆ. ಇದರಿಂದ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಸಹ ಕಡಿಮೆಯಾಗುತ್ತದೆ.

ಆದ್ದರಿಂದ ಹಿಡಕಲ್ ಜಲಾಶಯದಿಂದ ಘಟಪ್ರಭಾ ಎಡದಂಡೆ, ಬಲದಂಡೆ ಮತ್ತು ಸಿಬಿಸಿ ಕಾಲುವೆಗಳಿಗೆ ಒಟ್ಟು 2.93 ಟಿಎಂಸಿ ನೀರನ್ನು ತುರ್ತಾಗಿ ಹರಿಸುವಂತೆ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಅಧಿಕಾರಿಗಳಿಗೆ ಪತ್ರ ಬರೆದು ವಿನಂತಿಸಿಕೊಂಡಿದ್ದಾರೆ.

# ಪತ್ಯ ಮುಖೇನ ಮಕ್ಕಳಿಗೆ ವಚನ ಸಾಹಿತ್ಯ ಪರಿಚಯಿಸುವಂತಾಬೇಕು: ಡಾ. ಗೀತಾದಯಣ್ಣವರ

ಬೆಳಗಾವಿ: ವಚನಗಳು ಕನ್ನಡದಅಮೂಲ್ಯ ರತ್ನಗಳು. ಜೀವನದ ಮೌಲ್ಯಗಳನ್ನು ಅತ್ಯಂತ ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ಹೇಳಿದವರು ಶರಣರು. ಅವರ ವಚನಗಳನ್ನು ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಿಗೆ ಪತ್ಯದ ಮೂಲಕ ತಿಳಿಸುವ ಕಾರ್ಯಜರುಬೇಕೆಂದು ಬೆಳಗಾವಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ.ಗೀತಾದಯಣ್ಣವರ ಹೇಳಿದರು.

ಅವರು ಶಿವಬಸವ ನಗರದ ಲಿಂಗಾಯತ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಬೆಳಗಾವಿ ಜಿಲ್ಲಾಘಟಕದ ಆಶ್ರಯದಲ್ಲಿ ಅಮಾವಾಸ್ಯೆ ಅನುಭಾವ ಕಾರ್ಯಕ್ರಮದಲ್ಲಿ ವಚನ



ಸಾಹಿತ್ಯದಲ್ಲಿ ಶಿಕ್ಷಣದ ಪರಿಕಲ್ಪನೆ ವಿಷಯ ಕುರಿತು ಅನುಭಾವ ನೀಡಿ ಮಾತನಾಡಿದರು.

ಶರಣ ವಚನಗಳು ಸಮಾಜವನ್ನು ಪರಿವರ್ತಿಸುವ ಸಂಜೀವಿನಿಯಾಗಿವೆ ಬೌದ್ಧಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ವಿಕಸನಗೊಳಿಸುವ ಶಕ್ತಿ ವಚನಗಳಲ್ಲಿ ಅಡಗಿದೆ. ಪ್ರತಿ ವಚನಗಳಲ್ಲಿಯೂ ನೈತಿಕ ಶಿಕ್ಷಣ ಹಾಸುಹೊಕ್ಕಾಗಿವೆ. ಇಂದಿನ ಒತ್ತಡದ ಬದುಕಿನಲ್ಲಿ ಮಕ್ಕಳಿಗೆ ನೈತಿಕ ಹಾಗೂ ಸಂಸ್ಕಾರ ಭರಿತವಾದ ಶಿಕ್ಷಣದ ಅವಶ್ಯಕತೆಇದೆ. ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ವಚನಗಳನ್ನು ಅಳವಡಿಸುವ ಕಾರ್ಯವನ್ನು ಪಠ್ಯಪುಸ್ತಕ ಮಂಡಳಿಯವರು ಮಾಡಲೇಬೇಕು.

ಶಿಕ್ಷಣದ ಮೂಲ ಧ್ಯೇಯವೇ ಮಾನವಿಯತ ಯನ್ನು ಬಿತ್ತುವುದು ಹಾಗೂ ಜೀವನದ ಮೌಲ್ಯಗಳನ್ನು ಕಲಿಸುವುದಾಗಿದೆ. ಇಂದುಯಾಂತ್ರಿಕ ಜೀವನದಿಂದಾಗಿ ಮೌಲ್ಯಗಳು ಕುಸಿಯುತ್ತಿವೆ.

ಬಾಲ್ಯಾವಸ್ಥೆಯಲ್ಲಿ ಯೇ ಉತ್ತಮವಾಗಿ ಸಂಸ್ಕಾರಗಳನ್ನು ನೀಡಿದ್ದೇಆದರೆ ಸಮಾಜದಲ್ಲಿ ಸೈದ್ಧಾಂತಿಕ ಬದಲಾವಣೆಗಳನ್ನು ತರಲು ಸಾಧ್ಯವೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯಅಧ್ಯಕ್ಷೆ

ಶ್ರೀಮತಿ ರತ್ನಪ್ರಭಾ ಬೆಲ್ಲದಅವರು ಮಾತನಾಡಿ ಮಹಾಸಭೆಯು ಅನೇಕ ಯುವಪ್ರತಿಭೆಗಳಿಗೆ ವೇದಿಕೆಯ ಅವಕಾಶವನ್ನು ಕಲ್ಪಿಸಿಕೊಡುತ್ತಿದೆ. ಮಕ್ಕಳಲ್ಲಿ ಜ್ಞಾನದ ಬೀಜವನ್ನು ಬಿತ್ತಿದಾಗ ಮಾತ್ರ ಉತ್ತಮವಾದ ಸಮಾಜವನ್ನು ನಿರ್ಮಿಸಲು ಸಾಧ್ಯ. ವಚನಕಾರರು ತಮ್ಮ ವಚನಗಳಲ್ಲಿ ಅಂತಹಜೀವನದ ವಿಧಾನಗಳನ್ನು ಅತ್ಯಂತ ಸರಳವಾಗಿ ನಿರೂಪಿಸಿದ್ದಾರೆ. ಮಹಾಸಭೆ ಮಕ್ಕಳಿಗಾಗಿ ಹಾಗೂ ಯುವಜನತೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ರೂಪಿಸುತ್ತಿದೆ. ಎಲ್ಲರೂಇದರ ಸದಪಯೋಗ ಪಡೆದು ಕೊಳ್ಳಬೇಕೆಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಕಾರಂಜಿಮಠದ ಪೂಜ್ಯ ಗುರುಸಿದ್ಧ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತ, ಶರಣ ಸಾಹಿತ್ಯದಲ್ಲಿ ಬದುಕಿನಎಲ್ಲ ಆಯಾಮಗಳು ಮೂಡಿಬಂದಿವೆ. ಅವರು ಜೀವನವನ್ನು ಸ್ವಾನುಭಾವದ ಮೂಲಕ ನಿರೂಪಿಸಿದರು. ಅವರ ವಚನಗಳು ಅನುಭಾವದ ಪುಂಜಗಳಾಗಿವೆ. ಕನ್ನಡ ಭಾಷೆಯಲ್ಲಿ ಅತ್ಯಂತ ಸರಳವಾಗಿ ಹೃದಯಕ್ಕೆ ಮುಟ್ಟುವಂತೆ ವಚನಗಳನ್ನು ರಚಿಸಿದ್ದಾರೆ. ಹೃದಯದ ಕಣ್ಣಿನಿಂದ ಅವುಗಳನ್ನು ಅವಲೋಕಿಸಿ ಜೀವನವನ್ನು ರೂಪಿಸಿ ಕೊಳ್ಳಬೇಕೆಂದು ಕರೆನೀಡಿದರು.

ಅನಿತಾ ಮಾಲಗತ್ತಿ ವಚನ ಪ್ರಾರ್ಥನೆ ಮಾಡಿದರು. ಅಕ್ಕಮಹಾದೇವಿ ತೆಗ್ಗಿ ವಚನ ವಿಶ್ಲೇಷಣೆ ನಡೆಸಿ ಕೊಟ್ಟರು, ಸುಧಾ ಪಾಟೀಲ ಸ್ವಾಗತಿಸಿದರು. ಜ್ಯೋತಿ ಮಾಳಿ ನಿರೂಪಿಸಿದರು. ನ್ಯಾಯವಾದಿ ಶ್ರೀ ವಿ.ಕೆ. ಪಾಟೀಲ್ ವಂದಿಸಿದರು. ಡಾ.ಗುರುದೇವಿ ಹುಲೆಪ್ಪನವರಮಠ, ಪ್ರೊ.ಎ.ಬಿ.ಕೊರಬು, ಪ್ರಸಾದ ಹಿರೇಮಠ, ಗುರುದೇವ ಪಾಟೀಲ, ಡಾ.ಮಹೇಶ ಗುರನಗೌಡರ ಮಹಾಸಭೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವಸ್ತು ಸಂಗ್ರಹಾಲಯಗಳು ಚರಿತ್ರೆಯ ಕೈಗನ್ನಡಿ: ಡಾ. ಎಸ್. ಕೆ. ಮೇಲಕಾರ

ಬೆಳಗಾವಿ: ವಸ್ತು ಸಂಗ್ರಹಾಲಯಗಳು ಗತಕಾಲದ ಸಂಸ್ಕೃತಿಯ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತವೆ. ಅವು ಚರಿತ್ರೆಯ ಕೈಗನ್ನಡಿ. ನಮ್ಮ ಪೂರ್ವಜರ ಭವ್ಯ ಸಂಸ್ಕøತಿಯ ವೈಭವಕ್ಕೆ ಸಂಬಂಧಿಸಿದ ವಸ್ತುಗಳನ್ನು ರಕ್ಷಿಸಿ, ಸಂಗ್ರಹಿಸಿ ಮುಂದಿನ ಜನಾಂಗಕ್ಕೆ ವರ್ಗಾಯಿಸುವುದು ನಮ್ಮ ಆದ್ಯತೆಯಾಗಬೇಕು. ಪ್ರತಿ ತಾಲ್ಲೂಕು, ಹಳ್ಳಿಗಳಲ್ಲಿ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಎಸ್. ಕೆ. ಮೇಲಕಾರ ಕರೆ ನೀಡಿದರು.

ನಗರದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕಾಲೇಜು ಇತಿಹಾಸ ಅಧ್ಯಾಪಕರ ಸಂಘದವತಿಯಿಂದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನೆ ಮಾಡಿ ಡಾ. ಎಸ್. ಕೆ. ಮೇಲಕಾರ ಅವರು ಮಾತನಾಡಿದರು.




ವಸ್ತು ಸಂಗ್ರಹಾಲಯಗಳು ಐತಿಹಾಸಿಕ ದಾಖಲೆಗಳಾಗಿವೆ. ಗತಕಾಲದ ಪ್ರತಿಯೊಂದು ವಸ್ತುವಿನ ಹಿಂದೆ ಅಗಾಧವಾದ ಚರಿತ್ರೆಯಿದೆ. ಇತಿಹಾಸದ ಪುನರಚನೆಗೆ ವಸ್ತು ಸಂಗ್ರಹಾಲಯಗಳು ಪೂರಕವಾಗಿವೆ. ನಮ್ಮಲ್ಲಿನ ಇತಿಹಾಸ ಪ್ರಜ್ಞೆಯ ಕೊರತೆಯಿಂದ ಇತಿಹಾಸಕ್ಕೆ ಸಂಬಂಧಿಸಿದ ಅದೆಷ್ಟೋ ವಸ್ತುಗಳು, ದಾಖಲೆಗಳನ್ನು ಕಳೆದುಕೊಂಡೆವು. ಇತಿಹಾಸದ ಸಂಶೋಧನೆಯ ಅಭಿರುಚಿ ಮತ್ತು ಅದರ ಬಗೆಗೆ ಪ್ರಜ್ಞೆ ಇರುವ ನಾವು ಅದರ ಮಹತ್ವವನ್ನು ಸಮಾಜಕ್ಕೆ ತಿಳಿಸಿಕೊಡುವ ಪ್ರಯತ್ನ ಮಾಡಬೇಕು. ಇತಿಹಾಸದ ಅರಿವನ್ನು ಸಮಾಜದಲ್ಲಿ ಮೂಡಿಸುವುದರ ಮೂಲಕ ಅದನ್ನು ಸಂರಕ್ಷಿಸುವ ಪ್ರಜ್ಞೆ ಬೆಳೆಸಬೇಕು ಎಂದರು.

ಅಧ್ಯಕ್ಷತೆವಹಿಸಿ ಇತಿಹಾಸ ಪ್ರಾಧ್ಯಾಪಕ ಡಾ. ಎಸ್. ಎ. ಕರ್ಕಿ ಮಾತನಾಡಿದರು. ಇತಿಹಾಸದ ವಸ್ತುಗಳು ನಾಡಿನ ಚರಿತ್ರೆಯ ದಿಕ್ಸೂಚಿಯಾಗಿವೆ. ನಾಡಿನ ದಿವ್ಯ ಸಂಸ್ಕøತಿಯ ಆಳ– ಅಗಲಗಳ ಶೋಧನೆಗೆ ದಾರಿ ಮಾಡಿಕೊಡುತ್ತವೆ. ಇತಿಹಾಸದ ಆಕರಗಳನ್ನು ಒಳಗೊಂಡ ವಸ್ತು ಸಂಗ್ರಹಾಲಯಗಳು ಸಂಶೋಧಕರಿಗೆ, ಆಸಕ್ತರಿಗೆ ಜ್ಞಾನದ ಭಂಡಾರ. ಅದನ್ನು ರಕ್ಷಿಸದೇ ಇದ್ದರೆ ತೆರೆಮರೆಗೆ ಸರಿಯುವ ಸಾಧ್ಯತೆ ಇದೆಯೆಂದು ಕಳವಳ ವ್ಯಕ್ತಪಡಿಸಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್ ಎಸ್ ತೇರದಾಳ ಅವರು ವಸ್ತು ಸಂಗ್ರಹಾಲಯದ ಚಾರಿತ್ರಿಕ ಪದರುಗಳನ್ನು ವಿವರಿಸಿದರು. ಎಲ್ಲಾ ಜ್ಞಾನ ಶಿಸ್ತುಗಳಿಗೆ ಇತಿಹಾಸ ಭೂಮಿಕೆಯನ್ನು ಒದಗಿಸುತ್ತದೆ. ನಮ್ಮ ಅವಜ್ಞೆಯಿಂದ ನಾವು ಕಳೆದುಕೊಂಡ ಐತಿಹಾಸಿಕ ಸಂಪತ್ತನ್ನು ಮರಳಿ ಪಡೆಯಲಾರೆವು. ಆದರೆ, ನಮ್ಮ ಹಿರಿಯರಿಂದ ರಕ್ಷಿಸಿದ ಇತಿಹಾಸದ ಪ್ರತಿ ವಸ್ತುಗಳನ್ನು ಸಂರಕ್ಷಿಸುವ ಬಹು ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇತಿಹಾಸ ಅಧ್ಯಾಪಕರ ಸಂಘದ ಅಧ್ಯಕ್ಷರಾದ ಡಾ. ಮಂಜುನಾಥ ಎನ್. ಬೆನ್ನೂರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಸ್ತು ಸಂಗ್ರಹಾಲಯಗಳು ಇತಿಹಾಸದ ಜ್ಞಾನ ಭಂಡಾರವಾಗಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಬೇಕಾಗುವ ಮಹತ್ವದ ದಾಖಲೆಗಳನ್ನು ಒದಗಿಸುತ್ತದೆ. ಇವುಗಳಿಂದ ಇತಹಾಸದ ಹೊಸ ಸಾಧ್ಯತೆಗಳನ್ನು ಪಡೆಯಬಹುದಾಗಿದೆ ಎಂದರು.

ವೇದಿಕೆಯಲ್ಲಿ ಡಾ. ರಮೇಶ ಕಾಂಬ್ಳೆ, ಪ್ರೊ. ಕೆ. ಎಸ್. ಮೂಡಗಿ, ಪ್ರೊ. ಪ್ರಭಯ್ಯನವರಮಠ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿವಿಧ ಸಾಧನೆ ಮಾಡಿದ ಇತಿಹಾಸ ಉಪನ್ಯಾಸಕರಾದ ಪ್ರಕಾಶ ಕುರ್ಪಿ, ಶಂಕರ ನಿಂಗನೂರು, ಡಾ. ರಮೇಶ ಕುಂಬಾರ, ಡಾ. ಕೃಷ್ಣ ಮೂರ್ತಿ ಇವರನ್ನು ಸನ್ಮಾನಿಸಲಾಯಿತು.

ಡಾ. ರಾಧಾ ಬಿ. ಆರ್. ನಿರೂಪಿಸಿದರು. ಮಹೇಶ ಅಂಗಡಿ ವಂದಿಸಿದರು. ಶಿಲ್ಪಾ ಮುದುಕಪ್ಪಗೋಳ ಪ್ರಾರ್ಥಿಸಿದರು. ಡಾ. ಬಿ. ಎಸ್. ಮಠ ಸ್ವಾಗತಿಸಿದರು. ಪ್ರೊ. ಶಂಕರ ಹೂಗಾರ ಪರಿಚಯಿಸಿದರು. ವಿಚಾರ ಸಂಕಿರಣದಲ್ಲಿ ವಿವಿಧ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿ ಮತ್ತು ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬೆಳಗಾವಿಯಲ್ಲಿ ಯುವಕನ ಹತ್ಯೆ ಪ್ರಕರಣ: ಇಬ್ಬರ ಬಂಧನ



ಬೆಳಗಾವಿ: ಮಾರಿಹಾಳ ಸರ್ಕಾರಿ ಶಾಲೆ ಆವರಣದಲ್ಲಿ ಯುವಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಮಾರಿಹಾಳ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ.

ತಾಲೂಕಿನ ಸುಳೇಭಾವಿ ನಿವಾಸಿ ಅಕ್ಷಯ ಕುಮಾರ್ ಕೊಣಕೇರಿ (23), ಮಾರಿಹಾಳ ನಿವಾಸಿ ರಾಜೇಸಾಬ್ ಮುಲ್ಲಾ (23) ಬಂಧಿತ ಆರೋಪಿಗಳು. ಶುಕ್ರವಾರ ಬೆಳಗ್ಗೆ ಮಾರಿಹಾಳ ಸರ್ಕಾರಿ ಶಾಲೆಯ ಕೊಠಡಿ ಎದುರು ಮಹಾಂತೇಶ ಕರಲಿಂಗಣ್ಣವರ್ (24) ಅವರ ಮೃತದೇಹ ಪತ್ತೆಯಾಗಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ಮಾರಿಹಾಳ ಪೊಲೀಸರು ತನಿಖೆ ಕೈಗೊಂಡಿದ್ದರು.

ನಾಲ್ಕು ದಿನಗಳ ಹಿಂದೆ ಕೊಲೆಯಾದ ಮಹಾಂತೇಶ ಹಾಗೂ ಆರೋಪಿಗಳ ಮಧ್ಯೆ ಕ್ಷುಲ್ಲಕ ಕಾರಣಕ್ಕೆ ಗಲಾಟೆಯಾಗಿತ್ತು. ಈ ವೇಳೆ ಕೊಲೆಯಾದ ಮಹಾಂತೇಶ್ ರಾಜೇಸಾಬ್‌ಗೆ ಧಮ್ಕಿ ಹಾಕಿದ್ದ. ಇದೇ ವೈಷಮ್ಯವಿಟ್ಟುಕೊಂಡು ಇಬ್ಬರು ಆರೋಪಿಗಳು ಮಹಾಂತೇಶ್‌ನನ್ನು ಹತ್ಯೆ ಮಾಡಿದ್ದಾರೆ. ಮೇ 18ರ ರಾತ್ರಿ ಶಾಲಾ ಕೊಠಡಿ ಎದುರು ಕುಳಿತಿದ್ದ ಮಹಾಂತೇಶ್‌ನನ್ನು ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು.